ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಆಗಸ್ಟ್ 04, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 82 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

# ಪ್ರಧಾನಿ ಭೇಟಿ ಮಾಡಿದ ಸಿಎಂ

## ಹೆಚ್ಚುವರಿ ಅಕ್ಕಿ, ಮೇಕೆದಾಟು ಅಣೆಕಟ್ಟು ಬಗ್ಗೆ ಮನವಿ



ಬೆಂಗಳೂರು, ಆ.3 - ಅನ್ನಭಾಗ್ಯ ಯೋಜನೆಗೆ ಹೆಚ್ಚುವರಿ ಅಕ್ಕಿ, ಕುಡಿಯುವ ನೀರಿಗಾಗಿ ಕೆಆರ್‌ಎಸ್ ಅಣೆಕಟ್ಟೆಗೆ ಪರ್ಯಾಯವಾಗಿ ಮೇಕೆದಾಟು ಬಳಿ ಸಮಾನಾಂತರ ಅಣೆಕಟ್ಟು ನಿರ್ಮಾಣಕ್ಕೆ ಇರುವ ಅಡ್ಡಿ-ಆತಂಕಗಳನ್ನು ನಿವಾರಿಸುವುದು ಸೇರಿದಂತೆ ರಾಜ್ಯದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಎರಡೂವರೆ ತಿಂಗಳ ನಂತರ ಮೊದಲ ಬಾರಿಗೆ ಪ್ರಧಾನಿ ಅವರನ್ನು ಸಂಸತ್‌ಭವನದಲ್ಲಿ ಸೌಹಾರ್ದಯುತ ಭೇಟಿಯಾದ ಸಂದರ್ಭದಲ್ಲಿ ಮೋದಿ ಅವರಿಗೆ ಮೈಸೂರು ಪೇಟ ತೊಡಿಸಿ, ಅಂಬಾರಿ ಮಾದರಿಯ ಪ್ರತಿಕೃತಿ ನೀಡಿದರು. ಬಳಿಕ ರಾಜ್ಯಕ್ಕೆ ಜರೂರಾಗಿ ಆಗಬೇಕಾಗಿರುವ ಯೋಜನೆ, ಕಾರ್ಯಕ್ರಮಗಳಿಗೆ ಅನುಮತಿ ನೀಡುವಂತೆ ಕೋರಿದ್ದಾರೆ.

ಪ್ರಧಾನಿಯವರಿಗೆ ಅಧಿಕೃತವಾಗಿ ಯಾವುದೇ ಮನವಿ ಪತ್ರ ನೀಡಿಲ್ಲ. ಮಾತುಕತೆ ಸಂದರ್ಭದಲ್ಲೇ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅನೌಪಚಾರಿಕವಾಗಿ ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲ, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾಗಿರುವ ಜಿಎಸ್‌ಟಿ (3ನೇ ಪುಟಕ್ಕೆ)

# ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಆಮದು ನಿರ್ಬಂಧ



ನವದೆಹಲಿ, ಆ. 3 - ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಹಾಗೂ ಕೆಲ ರೀತಿಯ ಕಂಪ್ಯೂಟರ್‌ಗಳ ಆಮದಿನ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ. ರಕ್ಷಣಾ ಕಾರಣಗಳಿಂದ ಹಾಗೂ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲು ನಿರ್ಬಂಧ ಹೇರಿರುವುದಾಗಿ ಸರ್ಕಾರ ತಿಳಿಸಿದೆ.

ಸರ್ಕಾರದ ಈ ಕ್ರಮದಿಂದಾಗಿ ಚೀನಾ ಹಾಗೂ ಕೊರಿಯಾದಂತಹ ದೇಶಗಳಿಂದ ಆಗುವ ಆಮದು ಪ್ರಮಾಣವೂ ಕಡಿಮೆಯಾಗಲಿದೆ. ಸರ್ಕಾರದ ನಿರ್ಬಂಧಗಳ ನಂತರ ಈ ವಸ್ತುಗಳ ಆಮದು ಮಾಡಿಕೊಳ್ಳುವವರು ಅನುಮತಿ ಪಡೆಯಬೇಕಿದೆ.

ಈ ನಿರ್ಬಂಧಕ್ಕೆ ಹಲವಾರು (3ನೇ ಪುಟಕ್ಕೆ)











## ಕಲುಷಿತ ನೀರಿನಲ್ಲಿ ವಿಷಕಾರಿ ಅಂಶಗಳಿಲ್ಲ

ಚಿತ್ರದುರ್ಗ, ಆ. 3 - ಇಲ್ಲಿನ ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟವರ ದೇಹ ಹಾಗೂ ನೀರಿನಲ್ಲಿ ಯಾವುದೇ ವಿಷಕಾರಿ ಅಂಶ ಪತ್ತೆಯಾಗಿಲ್ಲ ಎಂದು ವಿಧಿವಿಜ್ಞಾನ ಪ್ರಯೋಗಾಲಯದ ವರದಿ ತಿಳಿಸಿದೆ.

ನಗರಸಭೆ ವತಿಯಿಂದ ಪೂರೈಸಲಾಗುವ ನೀರಿನಲ್ಲಿ ವಿಷ ಬೆರೆಸಲಾಗಿದೆ ಎಂಬ ಹಿನ್ನೆಲೆಯಲ್ಲಿ ದಾವಣಗೆರೆಯ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಲಾಗಿತ್ತು. ಕಲುಷಿತ ನೀರಿನಿಂದಾಗಿ ಮೂವರು ಸಾವನ್ನಪ್ಪಿದ ಘಟನೆ ನಡೆದಿತ್ತು. ಈ ನಡುವೆ, ಪ್ರಕರಣಕ್ಕೆ (3ನೇ ಪುಟಕ್ಕೆ)


ಫರ್ನೀಚರ್ ಎಕ್ಸ್‌ಪೋ ಅಂಡ್ ಹೋಂ ಇಂಟೀರಿಯರ್



ವಾಲ್‌ಮೌಂಟ್ ಶೂ ರ್‍ಯಾಕ್‌ಗಳು ಹಾಗೂ ಚಪ್ಪಲ ಸ್ಟ್ಯಾಂಡ್‌ಗಳು.

- ದಿನಾಂಕ -
4, 5, 6, 7, 8

ವಿಳಾಸ : ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶಾಮನೂರು ರಸ್ತೆ, ದಾವಣಗೆರೆ.
ಮೊ : 88848 10976


## ಜ್ಞಾನವಾಪಿ ಮಸೀದಿ ಸಮೀಕ್ಷೆಗೆ ಅನುಮತಿ

ನವದೆಹಲಿ, ಆ. 3 - ವಾರಣಾಸಿಯ ಜ್ಞಾನವಾಪಿ ಮಸೀದಿಯಲ್ಲಿ ಪುರಾತತ್ವ ಇಲಾಖೆಯು ವೈಜ್ಞಾನಿಕ ಸಮೀಕ್ಷೆ ನಡೆಸಲು ಅಲಹಾಬಾದ್ ಹೈಕೋರ್ಟ್ ಅನುಮತಿ ನೀಡಿದೆ. ಮೊದಲೇ ಇದ್ದ ಹಿಂದೂ ದೇವಾಲಯದ ಮೇಲೆ ಮಸೀದಿ ನಿರ್ಮಿಸಲಾಗಿತ್ತೇ ಎಂಬ ವಿಷಯ ಇತ್ಯರ್ಥಪಡಿಸಲು ಸಮೀಕ್ಷೆ ನಡೆಸಲು ಅನುಮತಿ ನೀಡಲಾಗಿದೆ.

ಜಿಲ್ಲಾ ನ್ಯಾಯಾಲಯವು ಮೊದಲು ಸಮೀಕ್ಷೆಗೆ ಅನುಮತಿ ನೀಡಿತ್ತು. ಈ (3ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 163' 9 ಇಂಚು
ಒಳ ಹರಿವು : 5850 ಕ್ಯೂಸೆಕ್ಸ್
ಹೊರ ಹರಿವು : 191 ಕ್ಯೂಸೆಕ್ಸ್
ಹಿಂದಿನ ವರ್ಷ : 184'4 ಇಂಚು


hcgoncology.com

HCG The Specialist in Cancer Care
adding life to years

Consult-Radiation Oncology from HCG's Expert Network

DR. MAHALAKSHMI
Consultant - Radiation Oncology
Sunitha Hospital, Chitradurga.

Date : 5th August 2023, Saturday
Time : 11 am to 2 pm
Venue : SUNITHA HOSPITAL
Kelagote Road, Near Akashvani, Chitradurga.
For appointments call : 78294 34249



JGI
Sri Suparshwanath Educational Trust ®
Jain Public School, Davangere.
Affiliated to CBSE , New Delhi No. 830459



ಡಾ॥ ಗುರುರಾಜ್ ಕರ್ಜಗಿ
ಶಿಕ್ಷಣ ತಜ್ಞರು,
ಅಧ್ಯಕ್ಷರು, ಸೃಜನಶೀಲ ಅಧ್ಯಾಪನ ಕೇಂದ್ರ

ಇವರು ದಿನಾಂಕ : 05/08/2023 ರಂದು ನಮ್ಮ ಶಾಲೆಗೆ ಬರಲಿದ್ದಾರೆ. 'ಮಕ್ಕಳ ಪಾಲನ ಪೋಷಕರ ಕಲೆ' (Art of Parenting) ವಿಷಯದ ವಿಚಾರವಾಗಿ ಪ್ರಸ್ತುತ ಪಡಿಸಲಿದ್ದಾರೆ.

ಈ ಕಾರ್ಯಕ್ರಮ ಯುಟ್ಯೂಬ್‌ನಲ್ಲಿ ಪ್ರಸಾರವಾಗಲಿದ್ದು.
https://youtube.com/live/ys53OgpP33k?feature=share
ಈ ಲಿಂಕ್‌ನ ಮೂಲಕ ಕಾರ್ಯಕ್ರಮವನ್ನು ಆಸಕ್ತರು ನೇರವಾಗಿ ವೀಕ್ಷಿಸಬಹುದು.

Address
#323 , Near Veereshwara Punyashrama , Bada Cross, Davangere, 577003.
www.jpsdvg2008@gmail.com www.jpsdvgrs.in


## ಶ್ರೀಮತಿ ಕೋಗುಂಡಿ ಗಿರಿಜಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ, 4ನೇ ಕ್ರಾಸ್ ವಾಸಿ
ದಿ॥ ಕೋಗುಂಡಿ ಚನ್ನಬಸಪ್ಪನವರ ಧರ್ಮಪತ್ನಿ
**ಶ್ರೀಮತಿ ಕೋಗುಂಡಿ ಗಿರಿಜಮ್ಮ**
ಅವರು ದಿನಾಂಕ 03-08-2023ರ ಗುರುವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 84 ವರ್ಷ ವಯಸ್ಸಾಗಿತ್ತು.

ಶ್ರೀಮತಿ ಗಿರಿಜಮ್ಮ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಕೋಗುಂಡಿ ಬಕ್ಕೇಶಪ್ಪ ಮತ್ತು ನಿವೃತ್ತ ಅಭಿಯಂತರರಾದ ಕೋಗುಂಡಿ ನಾಗರಾಜಪ್ಪ (ಬೆಂಗಳೂರು) ಅವರುಗಳ ಅತ್ತಿಗೆಯವರಾಗಿದ್ದಾರೆ.

ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಶ್ರೀಮತಿ ಗಿರಿಜಮ್ಮ ಅವರ ಪಾರ್ಥಿವ ಶರೀರವನ್ನು ದಿನಾಂಕ 04-08-2023ರ ಶುಕ್ರವಾರ ಮಧ್ಯಾಹ್ನ 12.30 ರವರೆಗೆ ಕೆ.ಬಿ. ಬಡಾವಣೆಯಲ್ಲಿರುವ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ 1 ಗಂಟೆಗೆ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯಕ್ಕೆ ದೇಹದಾನ ಮಾಡಲಾಗುವುದು.

- ದುಃಖತಪ್ತ ಕುಟುಂಬ ವರ್ಗ

# ರಾಣೇಬೆನ್ನೂರು ಆಧ್ಯಾತ್ಮಿಕ ಕೇಂದ್ರದ ತವರೂರು



**'ಜ್ಞಾನವಾಹಿನಿ' ಕಾರ್ಯಕ್ರಮದಲ್ಲಿ ಡಾ. ಚನ್ನಮಲ್ಲಿಕಾರ್ಜುನ ಶ್ರೀ**

ರಾಣೇಬೆನ್ನೂರು,ಆ.3- ರಾಣೇಬೆನ್ನೂರು ಕೇವಲ ವಾಣಿಜ್ಯ ನಗರವಾಗದೇ, ಆಧ್ಯಾತ್ಮಿಕ ಕೇಂದ್ರದ ತವರೂರು ಕೂಡಾ ಆಗಿ, ಧಾರ್ಮಿಕ ಕ್ಷೇತ್ರಕ್ಕೆ ಹಲವಾರು ಸಾಧು-ಸಂತರನ್ನ ಕೊಡುಗೆಯಾಗಿ ನೀಡಿದೆ ಎಂದು ಡಾ. ಶ್ರೀ ಒಡೆಯರ್ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಇಲ್ಲಿನ ಮೃತ್ಯುಂಜಯ ನಗರದ ಶ್ರೀ ಚನ್ನೇಶ್ವರ ಮಠ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಸಮುದಾಯ ಭವನದಲ್ಲಿ ಲಿಂಗೈಕ್ಯ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ 'ಚಿತ್ ಬೆಳಕಿನಲ್ಲಿ ಜ್ಞಾನವಾಹಿನಿ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಅಧಿಕಮಾಸದಲ್ಲಿ ಸಾಧು-ಸಂತರ, ದೇವರ ದರ್ಶನವನ್ನು ಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆ. ಜ್ಞಾನದ ಹಸಿವು ಉಳಿದೆಲ್ಲ ಹಸಿವುಗಳಿಗಿಂತ ಮಿಗಿಲಾಗಬೇಕು. ಮನುಷ್ಯನ ಬದುಕು ಇತರ ಪ್ರಾಣಿಗಳಿಂದ ಬೇರೆಯಾಗಿ ಸಾರ್ಥಕವಾಗಬೇಕಾದರೆ ಸಾಧನೆ ಆಗಬೇಕು.

ಅಧ್ಯಾತ್ಮ ನನ್ನನ್ನು ನಾನು ಅರಿತುಕೊಳ್ಳುವ ಉತ್ತಮ ಮತ್ತು ಸುಲಭ ಮಾರ್ಗ. ಜ್ಞಾನವಾಹಿನಿಯ ಈ ಸಮಯದಲ್ಲಿ ಪ್ರೊಫೆಸರ್ ಅ.ಸಿ. ಹಿರೇಮಠ ಇವರ ಧಾರ್ಮಿಕ ಸೇವೆಯನ್ನು ಸ್ಮರಿಸಬೇಕಾದದ್ದು ನಮ್ಮ ಕರ್ತವ್ಯ ಎಂದು ಅವರು ನುಡಿದರು.

'ಅಧಿಕ ಮಾಸದ ಆಧ್ಯಾತ್ಮ' ಎಂಬ ಉಪನ್ಯಾಸವನ್ನು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ತಾಲೂಕು ಘಟಕದ ಅಧ್ಯಕ್ಷ ಶ್ರೀ ಪ.ವಿ. ಮಠದ ಭಗವಾನ್ ಪರಮೇಶ್ವರ ನೀಡಿದರು

ಇದೇ ಸಂದರ್ಭದಲ್ಲಿ ತಾಲೂಕು ಶ್ರೀ ವೀರಶೈವ ಜಂಗಮ ಪುರೋಹಿತ ಮತ್ತು ಅರ್ಚಕರ ಸಂಘದ ದ್ವಿತೀಯ ವಾರ್ಷಿಕೋತ್ಸವ ಆಚರಿಸಲಾಯಿತು.

ಪ್ರವಚನಕಾರ ಶ್ರೀ ವೇದಮೂರ್ತಿ ಗದಿಗೆಯ ಸ್ವಾಮಿ ಹಿರೇಮಠ ಶ್ರಾವಣ ಮಾಸದ ಬಗ್ಗೆ ವಿಶೇಷ ಮಾಹಿತಿ ನೀಡಿದರು.

ಸಂಘದ ಕಾರ್ಯದರ್ಶಿಯಾಗಿದ್ದ ಪ್ರೊಫೆಸರ್ ಅ. ಸಿ. ಹಿರೇಮಠ್ ಇವರು ಶಿವಾಧೀನರಾಧ ಪ್ರಯುಕ್ತ ಅಮೃತ ಗೌಡ ಡಿ. ಹಿರೇಮಠ ಇವರನ್ನು ಸಂಸ್ಥೆಯ ನೂತನ ಕಾರ್ಯದರ್ಶಿಯನ್ನಾಗಿ ಶ್ರೀಗಳು ನೇಮಿಸಿದರು.

ನಗರದ ಗಣ್ಯ ವರ್ತಕ ಬಿ. ಎಸ್. ಪಟ್ಟಣ ಶೆಟ್ಟರು ನುಡಿ ಸೇವೆ ಮಾಡಿದರು. ಶ್ರೀ ವೀರಶೈವ ಜಂಗಮ ಪುರೋಹಿತ ಮತ್ತು ಅರ್ಚಕರ ಸಂಘದ ಅಧ್ಯಕ್ಷ ವೇದಮೂರ್ತಿ ಅಧ್ಯಕ್ಷತೆ ವಹಿಸಿದ್ದರು

ಶಿಕ್ಷಕ ಜಗದೀಶ ಮಳಿಮಠ ಸ್ವಾಗತಿಸಿದರು. ಶ್ರೀಮತಿ ಕಸ್ತೂರಮ್ಮ ಪಾಟೀಲ ನಿರೂಪಣೆ ಮಾಡಿದರು. ಪ್ರಾಸ್ತಾವಿಕವಾಗಿ ಶಿವಕುಮಾರ್ ಶಾಸ್ತ್ರಿಗಳು ಮಾತನಾಡಿದರು. ರಾಚಯ್ಯ ಶಾಸ್ತ್ರಿಗಳು ವಂದಿಸಿದರು.

# ಗ್ರಾಮದೇವತೆ ಮೆರವಣಿಗೆ, ವಿಶೇಷ ಪೂಜೆ



**ಹರಿಹರ**

ಹರಿಹರ, ಆ. 3 - ನಗರದ ಗ್ರಾಮದೇವತೆ ಊರಮ್ಮ ದೇವಿಯನ್ನು ಶಿಭಾರ ವೃತ್ತದ ಮೂಲ ದೇವಸ್ಥಾನದಿಂದ, ಹೊಸಭರಂಪುರ ಬಡಾವಣೆ ಶ್ರೀ ಗ್ರಾಮದೇವತೆ ದೇವಸ್ಥಾನಕ್ಕೆ ಸಂಜೆ ಅದ್ದೂರಿ ಮೆರವಣಿಗೆಯೊಂದಿಗೆ ಬರ ಮಾಡಿಕೊಳ್ಳಲಾಯಿತು. ಮೆರವಣಿಗೆಯಲ್ಲಿ ಡೊಳ್ಳು, ಡ್ರಮ್ ಸೆಟ್ ಸೇರಿದಂತೆ ಕಲಾ ಮೇಳಗಳು ಮೆರವಣಿಗೆಗೆ ಮೆರಗನ್ನು ನೀಡಿದವು.

ಹೊಸಭರಂಪುರ ಬಡಾವಣೆಯ ದೇವಸ್ಥಾನದಲ್ಲಿ ಆಷಾಢ ಮಾಸದ ಅಂಗವಾಗಿ ದೇವಿಗೆ ವಿಶೇಷ ಪೂಜೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ , ಪಡ್ಲಿಗೆ ತುಂಬುವಿಕೆ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆಸಲಾಗುತ್ತದೆ.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ನಿಂಗಪ್ಪ ಚಂದಪೂರ್, ಕಸಬಾ ಗೌಡ್ರು. ಲಿಂಗಾರಾಜ್ ಪಾಟೀಲ್, ಗೌಡ್ರು ಪುಟ್ಟಪ್ಪ, ದೇವಸ್ಥಾನ ಸಮಿತಿ ಅಧ್ಯಕ್ಷ ಪೂಜಾರ್ ಈರಣ್ಣ, ಪ್ರಧಾನ ಕಾರ್ಯದರ್ಶಿ ಕೆ.ಬಿ. ರಾಜಶೇಖರ, ಖಜಾಂಚಿ ಸುರೇಶ್ ಚಂದಪೂರ್, ಉಪಾಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ, ನಿರ್ದೇಶಕರಾದ ಎಂ.ಚಿದಾನಂದ ಕಂಚಿಕೇರಿ, ನೀಲಗುಂದ ಪರಮೇಶ್ವರಪ್ಪ, ದಾವಣಗೆರೆ ರುದ್ರೇಶ್, ಹಣಿಗಿ ಸುರೇಶಪ್ಪ, ಹಾವನೂರು ಈರಣ್ಣ, ರಾಘು ಚೌಗಲೆ, ಮಜ್ಜಿಗಿ ಚಂದ್ರಪ್ಪ, ಕರಿಬಸಪ್ಪ ಕಂಚಿಕೇರಿ, ಬೆಣ್ಣೆ ಸಿದ್ದೇಶ್, ವೇದಮೂರ್ತಿ, ಗುಡ್ಡದ್ ಮಹಾಂತೇಶ್, ಅರ್ಚಕರು ಈರಣ್ಣ, ನಾಗರಾಜ್, ನಂಜುಡಪ್ಪ, ಕಣದಾಳ ಶೇಖರಪ್ಪ, ಕಸಬಾ ಬಣಕಾರ ಮಹಾಂತೇಶ್, ಮಾಜೇನಹಳ್ಳಿ ಬಣಕಾರ ಆಂಜನೇಯ, ದುರಗಪ್ಪ, ಆನಂದ ಕಣದಾಳ, ಹರಪನಹಳ್ಳಿ ಬಸವರಾಜಪ್ಪ, ಗುರುಪ್ರಸಾದ್ ಕಂಚಿಕೇರಿ, ಪ್ರಕಾಶ್ ಕಂಚಿಕೇರಿ ಸಿಂಗಾಡಿ ಸಿದ್ದಪ್ಪ ಮತ್ತಿತರರಿದ್ದರು.

## ಹರಿಹರ ಕಟ್ಟಡದ ಮೇಲಿನ ಗಿಡಗಳ ತೆರವು



ಹರಿಹರ, ಆ.3- ನಗರದ ಹೃದಯ ಭಾಗದಲ್ಲಿರುವ ನಗರಸಭೆಯ ಐಡಿಎಸ್ಎಂಟಿ ಕಟ್ಟಡ ಬಹಳ ಶಿಥಿಲವಾಗಿದ್ದು, ಕಟ್ಟಡದ ಮೇಲೆ ಭಾರೀ ಪ್ರಮಾಣದಲ್ಲಿ ಗಿಡಗಳು ಬೆಳೆದುಕೊಂಡು ಮಳೆಯ ನೀರು ಸರಾಗವಾಗಿ ಹರಿಯದೆ ಕೆಳಗಿನ ಮಳಿಗೆ ಗಳಲ್ಲಿ ಸೋರುತ್ತಿತ್ತು.

ಈ ಸಂಬಂಧ 'ಜನತಾವಾಣಿ' ಪತ್ರಿಕೆಯಲ್ಲಿ ಬಂದ ವರದಿ ಹಿನ್ನೆಲೆಯಲ್ಲಿ ಇಂದು ನಗರಸಭೆಯ ಪೌರಾಯುಕ್ತ ಐಗೂರು ಬಸವರಾಜ್ ಮುತುವರ್ಜಿ ವಹಿಸಿ, ಕಟ್ಟಡದ ಮೇಲೆ ಸಂಪೂರ್ಣವಾಗಿ ಸ್ವಚ್ಛತೆ ಮಾಡಿಸಿ ನೀರು ಸರಾಗವಾಗಿ ಹೊರಗಡೆ ಹೋಗುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ .

# ಮಗುವಿಗೆ ಎದೆಹಾಲು ಬಿಟ್ಟು ಬೇರೆ ಹಾಲು ಬೇಡ



**ಮಲೇಬೆನ್ನೂರಿನಲ್ಲಿ ನಡೆದ ವಿಶ್ವ ಸ್ತನ್ಯಪಾನ ಸಪ್ತಾಹದಲ್ಲಿ ಮಕ್ಕಳ ತಜ್ಞ ಡಾ. ಶ್ರೀನಿವಾಸ್**

ಮಲೇಬೆನ್ನೂರು, ಆ. 3 - ತಾಯಿಯ ಎದೆಹಾಲು ಅಮೃತಕ್ಕೆ ಸಮಾನವಾಗಿದ್ದು ತಾಯಿಂದಿರು ಬೇರೆ ಹಾಲನ್ನು ಮಗುವಿಗೆ ಕೊಡಬಾರದೆಂದು ಎಂದು ಆದಿತ್ಯ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ ಶ್ರೀನಿವಾಸ್ ಹೇಳಿದರು.

ಅವರು ಗುರುವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಏರ್ಪಡಿಸಿದ್ದ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದರು. ತಾಯಿಯ ಎದೆಹಾಲು ನೈಸರ್ಗಿಕ ಅಮೃತವಾಗಿದೆ. ಆದ್ದರಿಂದ ಮಗು ಜನಿಸಿದ ಅರ್ಧ ಗಂಟೆಯೊಳಗೆ ಮಗುವಿಗೆ ಎದೆಹಾಲು ಉಣಿಸಬೇಕು. ಮೊದಲು ಬರುವ ಹಳದಿ ವರ್ಣದ ಗಟ್ಟಿಹಾಲು ಮಗುವಿಗೆ ಮೊದಲ ಲಸಿಕೆ ಇದ್ದಂತೆ ಎಂದರು.

ಸಮತೋಲನ ಆಹಾರ ಮತ್ತು ಪೌಷ್ಠಿಕ ಆಹಾರ ಎಲ್ಲಾ ಮಕ್ಕಳ ತಾಯಂದಿರು ಮತ್ತು ಗರ್ಭಿಣಿಯರು ತೆಗೆದುಕೊಳ್ಳಬೇಕು. ಇದರಿಂದ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ ಮತ್ತು ಬಾಣಂತಿಯರಿಗೆ ಎದೆಹಾಲು ಹೆಚ್ಚು ಉತ್ಪತ್ತಿಯಾಗುತ್ತದೆ. ಮಗುವಿಗೆ ಎದೆಹಾಲು ಬಿಟ್ಟು ಬೇರೆ ಹಾಲು ನೀಡಬಾರದು ಎಂದು ಡಾ ಶ್ರೀನಿವಾಸ್ ಹೇಳಿದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಲಕ್ಷ್ಮಿದೇವಿ ಮಾತನಾಡಿ, ಎದೆಹಾಲು ಕುಡಿಸುವುದರಿಂದ ಮಕ್ಕಳ ಮೆದುಳು ಚುರುಕಾಗುತ್ತದೆ ಮತ್ತು ಸಮಾಜದಲ್ಲಿ ಸದೃಢ ಮಕ್ಕಳಾಗುತ್ತಾರೆ. ಹರಳೆಣ್ಣೆ, ಜೇನುತುಪ್ಪ, ಸಕ್ಕರೆ ನೀರು, ಹಸುವಿನ, ಆಡಿನ ಹಾಲು, ಪೌಡರ್ ಹಾಲನ್ನು ನೀಡಬಾರದು. 6 ತಿಂಗಳು ತುಂಬಿದ ನಂತರ ಎದೆ ಹಾಲಿನೊಂದಿಗೆ ಪೂರಕ-ಪೋಷಕ ಮೆದು ಆಹಾರ ಆರಂಭಿಸಬೇಕು ಎಂದು ಮಾಹಿತಿ ನೀಡಿದರು.

ವೈದ್ಯರಾದ ಡಾ ಸುಷ್ಮಾ, ಡಾ ಮಮತ, ಆರೋಗ್ಯ ನಿರೀಕ್ಷಣಾಧಿಕಾರಿ ಕಿರಣ್, ಆರೋಗ್ಯ ಸುರಕ್ಷಾಧಿಕಾರಿಗಳಾದ ವಿಮಲಶೀಲ, ಯಾಸ್ಮಿನ್, ಸಿಬ್ಬಂದಿ ರಾಜು ಮತ್ತಿತರರು ಕಾರ್ಯಕ್ರಮದಲ್ಲಿದ್ದರು.

## ಶ್ರೀ ಉತ್ಸವಾಂಬ ದೇವಿಗೆ 48 ದಿನಗಳ ಕಾಲ ಮಹಾ ಮಂಡಲಾಭಿಷೇಕ



ದಾವಣಗೆರೆ, ಆ. 3 - ನಗರದ ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಬ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳು 11ನೇ ವರ್ಷದ ಮಹಾ ಮಂಡಲಾಭಿಷೇಕವು ಬರುವ ಸೆಪ್ಟಂಬರ್ 14ರ ಗುರುವಾರದವರೆಗೆ ನಡೆಯಲಿದೆ.

48 ದಿನಗಳ ಕಾಲ ತಾಯಿಯವರಿಗೆ ಸರ್ವ ಭಕ್ತಾದಿಗಳಿಂದ ಮಹಾ ಅಭಿಷೇಕ ಇರುತ್ತದೆ. ಕೊನೆಯ ದಿನದಂದು ಬೆಳಗಿನ ಜಾವ ಅಮ್ಮನವರಿಗೆ ಮಹಾ ಪೂಜೆ ಮತ್ತು ಮಧ್ಯಾಹ್ನ 12.30 ಕ್ಕೆ ಪ್ರಸಾದ ವಿನಿಯೋಗವಿರುತ್ತದೆ ಎಂದು ಶ್ರೀ ಉತ್ಸವಾಂಬ ದೇವಿ ಭಕ್ತ ಮಂಡಳಿ ತಿಳಿಸಿದೆ.

## ರಾಣೇಬೆನ್ನೂರಿನಲ್ಲಿ ದಾನಮ್ಮದೇವಿ ಪುರಾಣ



ವಾಗೀಶ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ನಿಮಿತ್ಯ ಗುಡ್ಡಾಪುರ ಶ್ರೀ ದಾನಮ್ಮದೇವಿಯ ಪುರಾಣವಿದೆ. ಇಂದಿನಿಂದ ಬರುವ ಆಗಸ್ಟ್ 15 ರವರೆಗೆ ನಡೆಯಲಿದೆ. ಪ್ರತಿದಿನ ಸಂಜೆ 6 ರಿಂದ ರಾತ್ರಿ 8 ರವರೆಗೆ ಪುರಾಣವನ್ನು ನೆಗಳೂರಿನ ಗದಿಗೆಯ್ಯ ಹಿರೇಮಠ ಶಾಸ್ತ್ರಿಗಳು ನಡೆಸಿಕೊಡುವರು.

## ನೀಲಗುಂದ ಗ್ರಾ.ಪಂ.ಅಧ್ಯಕ್ಷರಾಗಿ ಅನ್ನಪೂರ್ಣಮ್ಮ ರಾಜಪ್ಪ



ಹರಪನಹಳ್ಳಿ, ಆ.3- ತಾಲ್ಲೂಕಿನ ನೀಲಗುಂದ ಗ್ರಾಮ ಪಂಚಾಯಿತಿಗೆ ಎರಡನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಟಿ.ಅನ್ನಪೂರ್ಣಮ್ಮರಾಜಪ್ಪ, ಉಪಾಧ್ಯಕ್ಷರಾಗಿ ಕೆ.ಹನುಮಂತಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪರಿಶಿಷ್ಟ ಪಂಗಡ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಟಿ.ಅನ್ನಪೂರ್ಣಮ್ಮ ಹಾಗೂ ಸಾಮಾನ್ಯ ಕ್ಷೇತ್ರಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಹನುಮಂತಪ್ಪ ಮಾತ್ರ ನಾಮಪತ್ರ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಎಸ್. ಜಿ.ಹರೀಶ್ ತಿಳಿಸಿದರು. ಈ ಸಂದರ್ಭದಲ್ಲಿ ಟಿ.ಅಂಜಿನಪ್ಪ, ಬಿ.ವಾಗೀಶ್, ವಿಜಯಪ್ಪ, ಬೇಲೂರು ಸಿದ್ದೇಶ್, ಸೂರ್ಯನಾಯ್ಕ, ಟಿ.ಮನೋಜ್, ಎಂ.ಮಲ್ಲೇಶ್, ನಾಗರಾಜ್ ಪಾಟೀಲ್, ಟಿ.ತಿಮ್ಮೇಶ್, ಭೋವಿ ಮಹಾಂತೇಶ್ ಸೇರಿದಂತೆ ಇತರರು ಇದ್ದರು.

## ಸಿರಿಗೆರೆ ಅಣ್ಣನ ಬಳಗದಿಂದ ವೀರಗಾಸೆ ಸ್ಪರ್ಧೆಗೆ ಆಹ್ವಾನ

ಸಿರಿಗೆರೆ, ಆ.3- ಇಲ್ಲಿನ ಅಣ್ಣನ ಬಳಗ, ಶ್ರೀ ತರಳಬಾಳು ಬೃಹನ್ಮಠ ವತಿಯಿಂದ ಶ್ರೀ ಗುರುರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ 85ನೇ ಶ್ರದ್ಧಾಂಜಲಿ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 10 ಮತ್ತು 11ರಂದು ರಾಜ್ಯ ಮಟ್ಟದ ವೀರಗಾಸೆ ಸ್ಪರ್ಧೆ ಏರ್ಪಡಿಸಲಾಗಿದೆ.

ಸ್ಪರ್ಧೆಗಳು ಸಿರಿಗೆರೆಯ ಶ್ರೀಗುರು ಶಾಂತೇಶ್ವರ ದಾಸೋಹ ಮಂಟಪದಲ್ಲಿ ಜರುಗಲಿವೆ, ವಿಜೇತ ತಂಡದವರಿಗೆ ಪ್ರಥಮ 15 ಸಾವಿರ, ದ್ವಿತೀಯ 10 ಸಾವಿರ ಮತ್ತು ತೃತೀಯ 5 ಸಾವಿರ ರೂ.ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ ಆ. 7 ಕೊನೆಯ ದಿನವಾಗಿರುತ್ತದೆ.

ಭಾಗವಹಿಸಲಿಚ್ಚಿಸುವ ತಂಡಗಳು, ಅಧ್ಯಕ್ಷರು, ಅಣ್ಣನ ಬಳಗ, ಸಿರಿಗೆರೆ-577541 ಇಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗೆ ಮೊ.ನಂ.9986191968, 88616 47555 ಈ ನಂಬರಿನ ವಾಟ್ಸಾಪ್‌ನಲ್ಲಿಯೂ ಹೆಸರು ನೋಂದಾಯಿಸಿಕೊಳ್ಳಬಹುದು.

## ಪುಣಭಘಟ್ಟ ಗ್ರಾಮ ಪಂಚಾಯತಿಗೆ ಬಸಮ್ಮ ಕಲ್ಲಳ್ಳಿ ಅಧ್ಯಕ್ಷೆ



ಹರಪನಹಳ್ಳಿ, ಆ.3- ತಾಲ್ಲೂಕಿನ ಪುಣಭಘಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿ ಬಸಮ್ಮ ಕಲ್ಲಳ್ಳಿ ಹನುಮಂತಪ್ಪ ಹಾಗೂ ಉಪಾಧ್ಯಕ್ಷರಾಗಿ ಪಾರ್ವತಿಬಾಯಿ ಗುರುವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಕ್ರಮವಾಗಿ ಬಸಮ್ಮ ಕಲ್ಲಳ್ಳಿ ಹನುಮಂತಪ್ಪ, ಪಾರ್ವತಿ ಬಾಯಿ ಮಾತ್ರ ನಾಮಪತ್ರ ಸಲ್ಲಿಸಿದ್ದು ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶಿಕ್ಷಣ ಇಲಾಖೆ ಅಧಿಕಾರಿ ಎಲ್.ಆರ್. ಜಯರಾಜ್ ತಿಳಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಚುನಾವಣಾ ಅಧಿಕಾರಿ ಕಬೀರ ನಾಯ್ಕ, ಪಿಡಿಓ ಮಂಜುನಾಥ್, ಮುಖಂಡ ಕಲ್ಲಳ್ಳಿ ಹನುಮಂತಪ್ಪ, ಯಶವಂತ ಗೌಡ, ಎಸ್. ಮಂಜುನಾಥ್, ಮಹಾದೇವಪ್ಪ, ಬಸಣ್ಣ, ಪರಮೇಶ್ವರಪ್ಪ, ನಟರಾಜ್ ಪಾಟೀಲ್, ಬಸವರಾಜ್, ಅಶೋಕ, ಪತಿ ನಾಯ್ಕ, ರಾಜಣ್ಣ, ನಾಗರಾಜ್, ರಂಗಪ್ಪ ಮತ್ತಿತರರಿದ್ದರು.

## ಮದ್ಯಪಾನಕ್ಕೆ ಹಣ ನೀಡದ್ದಕ್ಕೆ ತಂದೆಯ ಕೊಲೆ: ಆರೋಪಿಗೆ ಶಿಕ್ಷೆ

**ಹೊನ್ನಾಳಿ**

ದಾವಣಗೆರೆ, ಆ. 3- ಮದ್ಯಪಾನ ಮಾಡಲು ತಂದೆ ವೃದ್ದಾಪ್ಯ ಹಣ ನೀಡಲಿಲ್ಲ ಎಂಬ ಕಾರಣಕ್ಕೆ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದ ನರಸಿಂಹಪ್ಪ (35)ಎಂಬಾತನಿಗೆ 6 ವರ್ಷ ಜೈಲು ಶಿಕ್ಷೆ 10 ಸಾವಿರ ರೂ. ದಂಡ ವಿಧಿಸಲಾಗಿದೆ ದಂಡ ಕಟ್ಟಲು ತಪ್ಪಿದಲ್ಲಿ 3 ತಿಂಗಳ ಹೆಚ್ಚುವರಿ ಸಾದಾ ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶಿಸಿದೆ.

ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬೇಲಿ ಮಲ್ಲೂರು ಗ್ರಾಮದಲ್ಲಿ ನರಸಿಂಹಪ್ಪನ ಮೇಲೆ ಕೊಲೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು.

ಸರ್ಕಾರದ ಪರ ಸರ್ಕಾರಿ ಅಭಿಯೋಜಕ ಸತೀಶ್ ವಾದ ಮಂಡಿಸಿದ್ದರು. ನ್ಯಾಯಾಧೀಶರಾದ ವಿಜಯಾನಂದ ಅವರು ಪ್ರಕರಣದ ತೀರ್ಪು ನೀಡಿದ್ದಾರೆ.

# ಪ್ರಧಾನಿಗೆ ಸಮರ್ಥನೆಯ ಅಗತ್ಯವಿಲ್ಲ : ಧನಕರ್ ತಿರುಗೇಟು



ನವದೆಹಲಿ, ಆ. 3 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಸಮರ್ಥಿಸಿಕೊಳ್ಳುತ್ತಿರುವುದಾಗಿ ಕಾಂಗ್ರೆಸ್ ಮಾಡಿರುವ ಆರೋಪ ತಳ್ಳಿ ಹಾಕಿರುವ ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್, ಜಾಗತಿಕ ಮಾನ್ಯತೆ ಪಡೆದಿರುವ ಹಾಗೂ 2014 ಮತ್ತು 2019ರಲ್ಲಿ ಜನಾದೇಶ ಪಡೆದಿರುವವರಿಗೆ ಸಮರ್ಥನೆಯ ಅಗತ್ಯವಿಲ್ಲ ಎಂದಿದ್ದಾರೆ.

ಮಣಿಪುರ ವಿಷಯ ಕುರಿತು ನಿಯಮ 267 ಅಡಿಯಲ್ಲಿ ಚರ್ಚೆ ನಡೆಸಬೇಕು ಎಂದು ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸದನದಲ್ಲಿ ಒತ್ತಾಯಿಸಿದರು. ಅಲ್ಲದೇ, ಸದನದ ಕಲಾಪವನ್ನು ಮಧ್ಯಾಹ್ನ 1 ಗಂಟೆಗೆ ಮುಂದೂಡಬೇಕೆಂದು ಸಲಹೆ ನೀಡಿದರು. ಇದಕ್ಕೆ ಕೆಲ ಸದಸ್ಯರು ಆಕ್ಷೇಪಿಸಿದರು.

ರಾಜ್ಯಸಭಾಧ್ಯಕ್ಷರು ಸಣ್ಣ ಸಲಹೆಗೂ ಒಪ್ಪುತ್ತಿಲ್ಲ. ಪ್ರಧಾನ ಮಂತ್ರಿಯನ್ನು ಸದನಕ್ಕೆ ಕರೆಸಬೇಕೆಂಬ ಬೇಡಿಕೆಗೂ ಒಪ್ಪುತ್ತಿಲ್ಲ. ನೀವೇಕೆ ಪ್ರಧಾನ ಮಂತ್ರಿಯನ್ನು ಇಷ್ಟೊಂದು ಸಮರ್ಥಿಸಿಕೊಳ್ಳುತ್ತೀರಿ ಎಂಬುದು ಅರ್ಥವಾಗುತ್ತಿಲ್ಲ ಎಂದರು.

ಖರ್ಗೆ ಹೇಳಿಕೆಗೆ ತೀವ್ರವಾಗಿ ಆಕ್ಷೇಪಿಸಿದ ಧನಕರ್, ನಾನು ಯಾರನ್ನೂ ಸಮರ್ಥಿಸಿಕೊಳ್ಳಬೇಕಿಲ್ಲ. ಪ್ರಧಾನ ಮಂತ್ರಿಗೆ ಜಾಗತಿಕ ಮಾನ್ಯತೆ ದೊರೆತಿದೆ. ಅವರ ನಾಯಕತ್ವದಲ್ಲಿ ಭಾರತ ಬೆಳೆದಿದೆ ಎಂದರು.

ಮೂರು ದಶಕಗಳ ಮೈತ್ರಿ ಸರ್ಕಾರದ ನಂತರ 2014 ಹಾಗೂ 2019ರಲ್ಲಿ ಲೋಕಸಭೆಯಲ್ಲಿ ಚುನಾವಣಾ ಫಲಿತಾಂಶ ದೊರೆತಿದೆ. ಭಾರತ ಹಿಂದೆಂದಿಗಿಂತಲೂ ವೇಗವಾಗಿ ಬೆಳೆಯುತ್ತಿದೆ. ಅದನ್ನು ನಿಲ್ಲಿಸಲಾಗದು ಎಂದೂ ಅವರು ಹೇಳಿದರು.

ನಾನು ಯಾರನ್ನೂ ಸಮರ್ಥಿಸಿಕೊಳ್ಳಬೇಕಿಲ್ಲ. ನಾನು ಸಂವಿಧಾನವನ್ನು ಸಮರ್ಥಿಸಿಕೊಳ್ಳಬೇಕಿದೆ. ಪ್ರತಿಪಕ್ಷದ ನಾಯಕರಾಗಿ ನಿಮ್ಮ ಇಂತಹ ಹೇಳಿಕೆ ಸಮರ್ಥನೀಯವಲ್ಲ ಎಂದ ಧನಕರ್, ನಿಗದಿಯಂತೆ ಶೂನ್ಯ ವೇಳೆಯಲ್ಲಿ ಮುಂದುವರಿದರು. ಈ ಹಂತದಲ್ಲಿ ಪ್ರತಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

## ರಾಘವೇಂದ್ರ ಮಠದ ಅರ್ಚಕ ಚನ್ನಗಿರಿ ಮಧುಸೂಧನಾಚಾರ್ ನಿಧನ



ದಾವಣಗೆರೆ, ಆ.3- ನಗರದ ಕೆ.ಬಿ. ಬಡಾವಣೆಯ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಅರ್ಚಕ ಚನ್ನಗಿರಿ ಮಧುಸೂಧನಾಚಾರ್ ಅವರು ಇಂದು ಮಧ್ಯಾಹ್ನ 3.30ಕ್ಕೆ ಬೆಂಗಳೂರಿನಲ್ಲಿ ನಿಧನರಾದರು.

ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಮಧುಸೂಧನಾಚಾರ್, ವೇ. ಚನ್ನಗಿರಿ ರಾಮಾಚಾರ್ಯರ ಸುಪುತ್ರ. ತಮ್ಮ ತಂದೆಯ ತರುವಾಯ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಅರ್ಚಕರಾಗಿ ಸುಮಾರು 20 ವರ್ಷಗಳಿಗೂ ಮೀಗಿಲಾಗಿ ಸೇವೆ ಸಲ್ಲಿಸುದ್ದರು. ಶ್ರೀ ಮಠವನ್ನು ನವೀಕರಣ ಮಾಡಿದ ಹೆಗ್ಗಳಿಕೆ ಅವರದಾಗಿತ್ತು.

ಪೂಜಾ ಕಾರ್ಯಕ್ರಮದ ಜೊತೆ - ಜೊತೆಯಲ್ಲಿ ಉಡುಪಿಯ ಪೇಜಾವರ ಮಠದ ಹಿರಿಯ ಯತಿಗಳಾಗಿದ್ದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಬಳಿ ಶ್ರೀಮಾನ್ ನ್ಯಾಯಸುಧಾವನ್ನು ಅಧ್ಯಯನ ಮಾಡಿದ ಪಂಡಿತರು ಎಂಬ ಗೌರವಕ್ಕೆ ಮಧುಸೂಧನಾಚಾರ್ ಪಾತ್ರರಾಗಿದ್ದರು.

ಮಧುಸೂಧನಾಚಾರ್, ಪತ್ನಿ, ಪುತ್ರ, ಸೊಸೆ ಮತ್ತು ಮಗಳನ್ನಲ್ಲದೇ, ಅನೇಕ ಬಂಧು- ಬಾಂಧವರನ್ನು ಅಗಲಿದ್ದಾರೆ. ಬೆಂಗಳೂರಿನ ಚಾಮರಾಜ ಪೇಟೆಯಲ್ಲಿರುವ ಮುಕ್ತಿ ಧಾಮದಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನಡೆಯಿತು.

**ಸಂತಾಪ :** ಮಧುಸೂಧನಾಚಾರ್ ನಿಧನಕ್ಕೆ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್, ಹಿರಿಯ ಜ್ಯೋತಿಷಿ ಸಿ.ಕೆ.ಆನಂದತೀರ್ಥಚಾರ್, ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ.ಶ್ರೀಕಾಂತ್ ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿ ಇಂದು ವನಮಹೋತ್ಸವ

ತುಂಗಭದ್ರಾ ಬಡಾವಣೆಯ ಹತ್ತಿರ ಉದ್ಯಾನವನಕ್ಕಾಗಿ ಮೀಸಲಿಟ್ಟ 4.5 ಎಕರೆ ಭೂ ಪ್ರದೇಶದಲ್ಲಿ ಇಂದು ಮಧ್ಯಾಹ್ನ 1 ಗಂಟೆಗೆ ವನಮಹೋತ್ಸವ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಏರ್ಪಡಿಲಾಗಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ ಮತ್ತು ಮೆ. ಗ್ರಾಸಿಂ ಇಂಡಸ್ಟ್ರೀಸ್ ಲಿ. ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ್ದು, ಜಿಲ್ಲಾಧಿಕಾರಿ ವೆಂಕಟೇಶ್ ಎಂ.ವಿ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ. ಕರೆಣ್ಣವರ, ಮಹಾನಗರ ಪಾಲಿಕೆ ಆಯುಕ್ತೆ ರೇಣುಕಾ ಹಾಗೂ ಸದಸ್ಯರು ಭಾಗವಹಿಸಲಿದ್ದಾರೆ.

## ಹಂಚಿನ ಮನೆ ಬಸವಲಿಂಗಮ್ಮ ನಿಧನ



ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಕುಣೆಬೆಳಕೆರೆ ಗ್ರಾಮದ ನಿವಾಸಿ **ಹಂಚಿನ ಮನೆ ಬಸವಲಿಂಗಮ್ಮನವರು** ದಿನಾಂಕ 3.8.2023 ಗುರುವಾರ ತಡರಾತ್ರಿ 12.10ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಗನನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.8.2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಮಗಳು, ಅಳಿಯ**
**ಶ್ರೀಮತಿ ಮಮತಾ, ಸಂಕೋಳ್ ಚಂದ್ರಶೇಖರ್**
**ಮೊ :9945981695, 7090799299**

## ಪರಮಶಿವಯ್ಯ ಜೆ. ನಿಧನ



ದಾವಣಗೆರೆ ನಿಟ್ಟುವಳ್ಳಿ ಶಕ್ತಿ ನಗರ 3ನೇ ಕ್ರಾಸ್ ನಿವಾಸಿ

**ಪರಮಶಿವಯ್ಯ ಜೆ.**

ಇವರು ದಿನಾಂಕ 03.08.2023ರ ಗುರುವಾರ ರಾತ್ರಿ 9.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.08.2023ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ರಾಮನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ - 98459 30000, 99862 21333**

## ಬಡರೋಗಿಗಳಿಗೆ ಹಣ್ಣು ಹಂಪಲು ವಿತರಣೆ



ದಾವಣಗೆರೆ, ಆ. 3- ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನ್ಮದಿನದ ಪ್ರಯುಕ್ತ ಸಿದ್ದರಾಮಯ್ಯನವರ ಅಭಿಮಾನಿ ಬಳಗದ ವತಿಯಿಂದ ನಗರದ ಸರ್ಕಾರಿ ಹೆರಿಗೆ ಆಸ್ಪತ್ರೆಯಲ್ಲಿ ಬಡ ರೋಗಿಗಳಿಗೆ ಹಣ್ಣು - ಹಂಪಲು ನೀಡಿ ಹಾಗೂ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸಿಹಿ ವಿತರಣೆ ಮಾಡಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮಹಾಪೌರ ವಿನಾಯಕ ಪೈಲ್ವಾನ್, ರಿಯಲ್ ಎಸ್ಟೇಟ್ ಉದ್ಯಮಿ ಎಸ್.ಟಿ. ರಾಜೇಶ್, ಕಾಂಗ್ರೆಸ್ ಮುಖಂಡ ಇಟ್ಟಿಗುಡಿ ಮಂಜುನಾಥ್, ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ನಿರ್ದೇಶಕ ಬಿ. ಲಿಂಗರಾಜ್, ಎಸ್.ಟಿ. ರವೀಂದ್ರ, ಬಾಬಣ್ಣ, ಕುಂದುವಾಡ ಗುಡದಪ್ಪ, ಆನಂದ್ ಶಿವಮೊಗ್ಗ, ಓಬಿಸಿ ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಕೊಗ್ಗನೂರು, ಬೀರೇಶ್, ಪವರ್ ಲಿಫ್ಟರ್ ಮಂಜುನಾಥ್, ಕವಿರಾಜ್, ಎಂ ಬಸವರಾಜ್, ಪರಮೇಶ್, ಸಿದ್ದಲಿಂಗಪ್ಪ, ಕಲ್ಲೇಶಣ್ಣ, ರಮೇಶ್, ಇನ್ನು ಅನೇಕ ಮುಖಂಡರು ಭಾಗವಹಿಸಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಬೆಂಗಳೂರು-ಮೈಸೂರು ಹೆದ್ದಾರಿ ಸಮಸ್ಯೆ ನಿವಾರಣೆಗೆ ತಂಡ : ಗಡ್ಕರಿ

ಬೆಂಗಳೂರು, ಆ.3- ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಉಂಟಾಗುತ್ತಿರುವ ಅಪಘಾತ ಮತ್ತು ಇತರ ಸಮಸ್ಯೆ ನಿವಾರಣೆಗೆ ತಜ್ಞರ ತಂಡ ಹಾಗೂ ಅಧಿಕಾರಿಗಳನ್ನು ವೀಕ್ಷಣೆಗೆ ಕಳುಹಿಸಿ ಲೋಪದೋಷ ಸರಿಪಡಿಸುವುದಾಗಿ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ದೆಹಲಿಯ ಸಂಸತ್‌ಭವನದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಭೂ ಸಾರಿಗೆ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಈ ಭರವಸೆ ನೀಡಿದ್ದಾರೆ.

ಈಗಾಗಲೇ ತಜ್ಞರ ತಂಡ ರಸ್ತೆ ಪರಿಶೀಲನೆ ನಡೆಸಿ ಗುತ್ತಿಗೆದಾರರಿಗೆ ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವುಗಳನ್ನು ಪಾಲನೆ ಮಾಡುವಂತೆ ನಾವು ಆದೇಶ ಮಾಡಿದ್ದೇವೆ. ಇದರ ನಂತರವೂ ಸಮಸ್ಯೆಗಳು ಉಂಟಾಗುತ್ತಿರುವ ಬಗ್ಗೆ ದೂರುಗಳು ಬರುತ್ತಲೇ ಇವೆ. ಇವನ್ನು ಬಗೆಹರಿಸಲು ಮತ್ತೊಂದು ತಜ್ಞರ ತಂಡ ಕಳುಹಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದ್ದಾರೆ.

ಭೇಟಿಯ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು, ಹೆದ್ದಾರಿಯಲ್ಲಾಗುತ್ತಿರುವ ಅಪಘಾತ ತಪ್ಪಿಸುವುದು ಹಾಗೂ ಹೆದ್ದಾರಿ ಬದಿಯಲ್ಲಿ ನಾಗರಿಕರಿಗೆ ಇತರೆ ಸೌಕರ್ಯಗಳನ್ನು ಸರ್ಮಪಕವಾದ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮಾಡಿದ ಮನವಿಗೆ ತಕ್ಷಣವೇ ಸ್ಪಂದಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗೆ ಪ್ರವೇಶ ಮತ್ತು ನಿರ್ಗಮನಕ್ಕೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಬೇಕು ಎಂದೂ ಅವರು ಕೋರಿದರು.

ಕೇರಳದ ಗಡಿ ಭಾಗದಿಂದ ರಾಜ್ಯವನ್ನು ಪ್ರವೇಶಿಸುವ ವಾಹನಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕೊಳ್ಳೇಗಾಲ ಮಾರ್ಗವಾಗಿ ಗುಂಡ್ಲುಪೇಟೆ, ನಂಜನಗೂಡು ಮೂಲಕ ಮೈಸೂರಿನ ತನಕ ರಸ್ತೆಯನ್ನು ನಾಲ್ಕು ಮತ್ತು ಆರು ಲೇನ್ ರಸ್ತೆಗಳಾಗಿ ಅಗಲೀಕರಣ ಮಾಡಬೇಕು ಎಂದು ಮನವಿ ಮಾಡಿಕೊಂಡರು.

ತಮಿಳುನಾಡು ಗಡಿಯಿಂದ ರಾಜ್ಯ ಪ್ರವೇಶಿಸುವ ರಸ್ತೆಗಳನ್ನು ನಾಲ್ಕು ಲೇನ್ ರಸ್ತೆಗಳನ್ನಾಗಿ ಕೊಳ್ಳೇಗಾಲ, ಮಳವಳ್ಳಿವರೆಗೆ ಅಗಲೀಕರಣಗೊಳಿಸಬೇಕು ಎಂದು ಮುಖ್ಯಮಂತ್ರಿಗಳು ವಿವರಿಸಿದರು.

ರಾಜ್ಯದಲ್ಲಿ ಮಳೆಯಿಂದ ಹಾನಿಗೀಡಾದ ರಸ್ತೆಗಳ ದುರಸ್ತಿಗೆ ತಕ್ಷಣವೇ ಇನ್ನೂರಾ ಐವತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎಂದು ಕೋರಿದರು.

ರಾಜ್ಯದಲ್ಲಿರುವ ವಿವಿಧ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಬೇಕು. ವಿವಿಧ ರಸ್ತೆಗಳ ನಿರ್ವಹಣೆಗಾಗಿ ಐವತ್ತು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಹೆದ್ದಾರಿಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಕೊಡಬೇಕು ಎಂದು ಮನವಿ ಮಾಡಿಕೊಂಡರು.

ಹೀಗೆ ವಿವಿಧ ರಸ್ತೆಗಳನ್ನು ಅಭಿವೃದ್ಧಿಪಡಿಸಿದರೆ ಮತ್ತು ನಿರ್ಮಿಸಿದರೆ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಸಿದ್ಧರಾಮಯ್ಯ ಅವರು ವಿವರಿಸಿದಾಗ, ಈ ಎಲ್ಲವುಗಳ ಕುರಿತು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕಂಡುಹಿಡಿಯುವುದಾಗಿ ಗಡ್ಕರಿ ಭರವಸೆ ನೀಡಿದ್ದಾರೆ.

# ತುಪ್ಪ ಮಾರಲು ಗ್ರಾಹಕನನ್ನೇ ಟೀಕಿಸುವುದೇ..?!

## ಆತುರದ ರಾಜಕಾರಣಿಗಳ ಮಾತುಗಳೂ... ಹೇಳಿಕೆಗಳ ಬುದ್ಧಿ ಮಟ್ಟಗಳೂ...

ಗ್ರಾಹಕನೇ ಮಹಾರಾಜ ಎಂದು ಇಂಗ್ಲಿಷಿನಲ್ಲಿ ಮಾತಿದೆ. ತಿರುಪತಿ ದೇವಾಲಯಕ್ಕೆ ಕೆ.ಎಂ.ಎಫ್. (ಕರ್ನಾಟಕ ಹಾಲು ಒಕ್ಕೂಟ) ತುಪ್ಪ ಪೂರೈಸಲು ಬಯಸಿದೆ ಎಂಬುದಾದರೆ ದೇವಾಲಯದ ಆಡಳಿತ ಮಂಡಳಿಯನ್ನು ಓಲೈಸುವ ಬದಲು ಟೀಕಿಸಿದರೆ ಹೇಗೆ? ಈ ಪ್ರಶ್ನೆ ಬಂದಿದ್ದು ಕೆಎಂಎಫ್ ಹಾಗೂ ತಿಮ್ಮಪ್ಪನ ದೇವಾಲಯ ನಿರ್ವಹಿಸುವ ಟಿ.ಟಿ.ಡಿ. (ತಿರುಮಲ ತಿರುಪತಿ ದೇವಸ್ಥಾನ) ಅಧಿಕಾರಿಗಳ ಹೇಳಿಕೆಗಳನ್ನು ನೋಡಿದಾಗ.

ತಿಮ್ಮಪ್ಪನ ದೇವಾಲಯಕ್ಕೆ ಒಂದು ವರ್ಷದಿಂದ ತುಪ್ಪ ಪೂರೈಕೆ ನಿಲ್ಲಿಸಿದ್ದೇವೆ ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ ಹೇಳುವುದರೊಂದಿಗೆ ಆ ಕುರಿತ ಚರ್ಚೆ ಆರಂಭವಾಗಿತ್ತು. ಅಷ್ಟಕ್ಕೇ ನಿಲ್ಲದ ನಾಯ್ಕ, ತಿರುಮಲ ದೇವಸ್ಥಾನ ಕಡಿಮೆ ಗುಣಮಟ್ಟದ ತುಪ್ಪ ಖರೀದಿಸುತ್ತಿದೆ ಎಂದು ಇಂಗಿತ ವ್ಯಕ್ತಪಡಿಸಿದ್ದರು.

ಇದರಿಂದ ಎರಡು ಚರ್ಚೆಗಳು ಆರಂಭವಾದವು. ಮೊದಲನೆಯದಾಗಿ ತಿರುಪತಿ ದೇವಾಲಯಕ್ಕೆ ಕೆಎಂಎಫ್ ತುಪ್ಪ ಪೂರೈಕೆ ಏಕೆ ನಿಂತಿತು ಎಂಬ ವಿಷಯ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಯಿತು. ಎರಡನೆಯದಾಗಿ ತಿಮ್ಮಪ್ಪನ ದೇವಾಲಯ ನಿರ್ವಹಿಸುವ ಟಿ.ಟಿ.ಡಿ. ಕಡಿಮೆ ಬೆಲೆಗಾಗಿ ತುಪ್ಪದ ಗುಣಮಟ್ಟದ ಜೊತೆ ರಾಜಿ ಮಾಡಿಕೊಂಡಿತೇ ಎಂಬುದು.

ಪ್ರಸಿದ್ಧ ತಿಮ್ಮಪ್ಪನ ದೇವಾಲಯಕ್ಕೆ ತುಪ್ಪ ಪೂರೈಸುವುದನ್ನು ನಿಲ್ಲಿಸಲಾಗಿದೆ ಎಂಬುದಕ್ಕೆ ಧಾರ್ಮಿಕ ತಿರುವು ನೀಡಲು ಹೋದ ಬಿಜೆಪಿ ನಾಯಕರು ತಾವೇ ಹಿಟ್ ವಿಕೆಟ್ ಮಾಡಿಕೊಂಡರು. ನಂತರ, ತುಪ್ಪದ ಗುಣಮಟ್ಟದ ಬಗ್ಗೆ ಮಾತನಾಡಿದ ಕೆ.ಎಂ.ಎಫ್. ಅಧ್ಯಕ್ಷರು ಹಿಟ್ ವಿಕೆಟ್ ಮಾಡಿಕೊಂಡಿದ್ದಾರೆ. ಕೆಎಂಎಫ್ ಅಧ್ಯಕ್ಷರ ಮಾತು ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಹೇಳಿಕೆ ನೀಡಿದ್ದರು.




ಇದೆಲ್ಲದರ ನಡುವೆ ಗರಂ ಆಗಿರುವ ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮಾ ರೆಡ್ಡಿ, ಆರು ತಿಂಗಳಲ್ಲಿ ಪೂರೈಸಬೇಕಿದ್ದ ತುಪ್ಪಕ್ಕೆ ನಂದಿನಿ ವರ್ಷ ತೆಗೆದುಕೊಂಡಿತ್ತು ಎಂದಿದ್ದಾರೆ. ಅಲ್ಲದೇ, ನಂದಿನಿ ತುಪ್ಪವನ್ನು ಒಂದು ವರ್ಷದಲ್ಲಿ ಶೇ.20ರಷ್ಟು ಮಾತ್ರ ಪೂರೈಸಿ 20 ವರ್ಷದ ಲಡ್ಡು ರುಚಿಯ ಹೆಗ್ಗಳಿಕೆ ಪಡೆಯಲು ಸಾಧ್ಯವೇ? ಎಂಬ ಪ್ರಶ್ನೆ ಮುಂದಿಟ್ಟಿದ್ದಾರೆ. ಟಿ.ಟಿ.ಡಿ.ಯ ಈ ಮಾತಿಗೆ ಸದ್ಯಕ್ಕೆ ಕೆಎಂಎಫ್ ಯಾವುದೇ ಸ್ಪಷ್ಟ ಉತ್ತರ ನೀಡಿಲ್ಲ.

ನಾವು ಅವರಿಗೆ ಉತ್ತಮ ತುಪ್ಪವನ್ನು ನೀಡಲು ಬಯಸುತ್ತೇವೆ. ಆದರೆ ಬೆಲೆಯಲ್ಲಿ ಮಾತ್ರ ರಾಜಿ ಇಲ್ಲ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಎಂ.ಕೆ.ಜಗದೀಶ್ ಹೇಳಿದ್ದಾರೆ.

ಕೆಎಂಎಫ್ ಕರ್ನಾಟಕದ ಮಂದಿಗೆ ಹೆಮ್ಮೆಯಾಗಿದೆ. ಕರ್ನಾಟಕದಲ್ಲಿ ಕೆಎಂಎಫ್ ಹಾಲು ಮಾರಲಿ, ಅಕ್ಕ ಪಕ್ಕದ ರಾಜ್ಯದ ಖಾಸಗಿ ಸಂಸ್ಥೆಗಳು ಮಾರಲಿ, ಆದರೆ ಗುಜರಾತ್‌ನ ಅಮುಲ್ ಇಲ್ಲಿ ಕಾಲಿಡಬಾರದು ಎಂದು ಹೇಳುವ ಕಟ್ಟಾ ಕನ್ನಡಿಗ ಕೆಎಂಎಫ್ ಪ್ರೇಮಿಗಳೂ ಇಲ್ಲಿದ್ದಾರೆ. ಇಷ್ಟೆಲ್ಲ ಆದರೂ ಕೆಎಂಎಫ್ ಒಂದು ವಾಣಿಜ್ಯ ಸಂಸ್ಥೆ ಎಂಬುದು ಮೂಲಭೂತ ಸತ್ಯ.

ವಾಣಿಜ್ಯ ಸಂಸ್ಥೆ ಎಂದ ಮೇಲೆ ಟೆಂಡರ್‌ನಲ್ಲಿ ಪಾಲ್ಗೊಳ್ಳುವುದಿಲ್ಲ, ನಾನು ಹೇಳಿದ ದರದಲ್ಲೇ ಖರೀದಿಸಬೇಕು ಎಂದು ಹೇಳಲು ಸಾಧ್ಯವೇ? ಹಾಗೂ ಆ ರೀತಿ ಖರೀದಿಸದೇ ಇರುವವರು ಗುಣಮಟ್ಟದಲ್ಲಿ ರಾಜೀ ಮಾಡಿಕೊಂಡಿದ್ದಾರೆ ಎನ್ನಲು ಸಾಧ್ಯವೇ? ಕೆಎಂಎಫ್ ತಾನೇ ತಿಂಗಳಿಗೆ ಹತ್ತಾರು ಟೆಂಡರ್ ಕರೆದ ವಿವರಗಳನ್ನು ತನ್ನ ವೆಬ್ ತಾಣದಲ್ಲಿ ಪ್ರಕಟಿಸುತ್ತಿದೆ! ಹೀಗಿರುವಾಗ ಖರೀದಿ ಟೆಂಡರ್‌ನಲ್ಲಿ ಸಗಟು ಮಾರಾಟ ನಿಗದಿತ ದರದಲ್ಲಿ ಎಂದರೆ ತಿಮ್ಮಪ್ಪ ಒಪ್ಪಿಯಾನೆ!!

ಮತ್ತೊಂದೆಡೆ ರಾಜಕಾರಣಿಗಳು ಆತುರಗಾರರಂತೆ ಸಾಮಾಜಿಕ ಮಾಧ್ಯಮ ಹಾಗೂ ಸಾಂಪ್ರದಾಯಿಕ ಮಾಧ್ಯಮಗಳಲ್ಲಿ ಹೇಳಿಕೆ ನೀಡುವುದು ಕೆ.ಎಂ.ಎಫ್. ವರ್ಚಸ್ಸಿಗೇ ಹಾನಿಕರವಲ್ಲವೇ? ಕಳೆದ ಚುನಾವಣೆ ವೇಳೆ ಕೆಎಂಎಫ್ ಹಾಗೂ ಅಮುಲ್ ನಡುವೆ ಸಂಘರ್ಷ ತರಲಾಯಿತು. ಇದರ ಪರಿಣಾಮ ಕೇರಳದಲ್ಲಿ ಕೆಎಂಎಫ್ ಮೇಲೆ ಆಯಿತು. ಈಗ ತಿರುಪತಿ ತಿಮ್ಮಪ್ಪನ ದೇವಾಲಯಕ್ಕೆ ತುಪ್ಪ ಪೂರೈಸುವ ವಿಷಯದಲ್ಲಿ ಅಂತರ ರಾಜ್ಯ ವಿವಾದ ಸೃಷ್ಟಿಸಲಾಗಿದೆ. ಇದೆಲ್ಲವೂ ಕೆಎಂಎಫ್ ಬ್ರಾಂಡ್ ಮೇಲೆ ಪರಿಣಾಮ ಬೀರುವುದಿಲ್ಲವೇ?

ಕೆ.ಎಂ.ಎಫ್. ನಂದಿನಿ ತುಪ್ಪವನ್ನು ತಿರುಪತಿ ತಿಮ್ಮಪ್ಪನ ದೇವಾಲಯಕ್ಕೆ ಪೂರೈಸುವುದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್, ಬಿಜೆಪಿ ಹಾಗೂ ಕೆಎಂಎಫ್ ಅಧ್ಯಕ್ಷರು ನೀಡಿದ ಹೇಳಿಕೆಗಳು ಆತುರಗಾರನಿಗೆ ಬುದ್ಧಿ ಮಟ್ಟ ಎಂಬ ಮಾತು ನೆನಪಿಸುತ್ತಿವೆ.

**- ಜಿ.ಎನ್. ಕಾಮತ್, ದಾವಣಗೆರೆ**

## ಪತ್ರಿಕೆಗಳ ನೋಂದಣಿ, ಮುದ್ರಣ ಮಸೂದೆಗೆ ರಾಜ್ಯಸಭೆ ಅಂಗೀಕಾರ

ನವದೆಹಲಿ, ಆ. 3 - ಪತ್ರಿಕೆಗಳು ಹಾಗೂ ನಿಯತಕಾಲಿಕಗಳ ನೋಂದಣಿ ಹಾಗೂ ಮುದ್ರಣಕ್ಕೆ ಸಂಬಂಧಿಸಿದ ನಿಯಮಗಳನ್ನು ಬದಲಿಸುವ ಮಸೂದೆಗೆ ರಾಜ್ಯಸಭೆ ಅಂಗೀಕಾರ ನೀಡಿದೆ.

ನಿಯತಕಾಲಿಕಗಳ ಮುದ್ರಣ ಹಾಗೂ ನೋಂದಣಿ ಮಸೂದೆಗೆ ಧ್ವನಿ ಮತದ ಮೂಲಕ ಅಂಗೀಕಾರ ನೀಡಲಾಗಿದೆ. ಈ ಬಗ್ಗೆ ಮಾತನಾಡಿ ರುವ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಈ ಮಸೂದೆಯಿಂದ ಮುದ್ರಣ ವಲ ಯದ ಕಾರ್ಯನಿರ್ಹವಣೆ ಸುಗಮವಾಗಲಿದೆ. ನಿಯತಕಾಲಿಕಗಳ ನೋಂದಣಿ ಹಾಗೂ ಮುದ್ರಣ ಸುಲಭವಾಗಲಿದೆ. ವಸಹಾ ತುಶಾಹಿ ಕಾಲದ ಹಲವಾರು ನಿರ್ಬಂಧ ಗಳು ತೆರವಾಗಲಿವೆ ಎಂದರು. 1867ರ ಕಾಲದ ಮುದ್ರಣ ಹಾಗೂ ಪುಸ್ತಕಗಳ ನೋಂದಣಿ ಕಾಯ್ದೆಯ ಜಾಗಕ್ಕೆ ಹೊಸ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆ.

ಪ್ರಸ್ತಾಪಿತ ಮಸೂದೆಯ ಅನ್ವಯ, ಪ್ರಕಾಶಕರು ಜಿಲ್ಲಾಧಿಕಾರಿಯ ಎದುರು ಯಾವುದೇ ಘೋಷಣೆ ಸಲ್ಲಿಸಬೇಕಿಲ್ಲ. ತಪ್ಪು ಮಾಹಿತಿ ನೀಡಿದ ಕಾರಣಕ್ಕಾಗಿ ಆರು ತಿಂಗಳವರೆಗಿನ ಜೈಲು ಶಿಕ್ಷೆಯಾಗುವ ಅಂಶವನ್ನೂ ತೆಗೆದು ಹಾಕಲಾಗುವುದು. ನಿಯತಕಾಲಿಕೆಗಳ ಶೀರ್ಷಿಕೆ ಲಭ್ಯವಿರುವ ಬಗ್ಗೆ ಆನ್‌ಲೈನ್ ಮೂಲಕ ಪರಿಶೀಲಿಸಬಹುದು. ಇದರಿಂದಾಗಿ ಪತ್ರಿಕೆಗಳು ಹಾಗೂ ನಿಯತಕಾಲಿಕಗಳ ನೋಂದಣಿ ತ್ವರಿತವಾಗಿ ಪೂರ್ಣಗೊಳ್ಳಲಿದೆ.

## ಲ್ಯಾಪ್‌ಟಾಪ್ ಆಮದು ನಿರ್ಬಂಧ

**(1ನೇ ಪುಟದಿಂದ)** ಕಾರಣಗಳಿವೆ. ಆದರೆ, ನಾಗರಿಕರ ಸುರಕ್ಷ ತೆಯೇ ಅತ್ಯಂತ ಪ್ರಮುಖ ಕಾರಣ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ದೇಶದಲ್ಲಿ ಅಂತರ್ಜಾಲ ಬಳಕೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ರಕ್ಷಣಾ ಅಪಾಯ ಇರುವ ವಸ್ತುಗಳ ಬಳಕೆಯಾಗಬಾರದು ಎಂದು ಅಧಿಕಾರಿಗಳು ಹೇಳಿದ್ದಾರೆ.

ತಕ್ಷಣದಿಂದ ಜಾರಿಗೆ ಬರುವಂತೆ ಲ್ಯಾಪ್‌ಟಾಪ್, ಟ್ಯಾಬ್ಲೆಟ್, ಆಲ್ ಇನ್ ಒನ್ ಪರ್ಸನಲ್ ಕಂಪ್ಯೂಟರ್ ಹಾಗೂ ಅತಿ ಸಣ್ಣ ಗಾತ್ರದ ಕಂಪ್ಯೂಟರ್, ಸರ್ವರ್‌ಗಳ ಆಮದಿನ ಮೇಲೆ ನಿರ್ಬಂಧ ಹೇರಲಾಗಿದೆ. ಈ ನಿರ್ಬಂಧವು ವಿಶ್ವ ವ್ಯಾಪಾರಿ ಒಕ್ಕೂಟದ ನಿಯಮಗಳಿಗೆ ಅನುಗುಣವಾಗಿದೆ ಎಂದೂ ಅಧಿಕಾರಿ ಹೇಳಿದ್ದಾರೆ. ವಿದೇಶಿ ವ್ಯಾಪಾರ ನೀತಿಯ ಅನ್ವಯ ನಿರ್ಬಂಧಗಳನ್ನು ಹೇರಲಾಗಿದೆ. ಆಮದಿನ ಮೇಲೆ ನಿಷೇಧ ಹೇರಿಲ್ಲ. ಆದರೆ, ಆಮದು ಸಾಮಗ್ರಿಗಳನ್ನು ನಿಯಂತ್ರಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸರ್ಕಾರದ ಈ ಕ್ರಮದಿಂದ ದೇಶೀಯವಾಗಿ ಬೆಲೆಗಳ ಮೇಲೆ ಪರಿಣಾಮವಾಗುವುದಿಲ್ಲ ಎಂದೂ ಅಧಿಕಾರಿಗಳು ಹೇಳಿದ್ದಾರೆ. ಆದರೆ, ಈ ಕ್ರಮ ಬೆಲೆಗಳ ಏರಿಕೆಗೆ ಕಾರಣವಾಗಬಹುದು ಎಂದು ಉದ್ಯಮದ ಪರಿಣಿತರು ಶಂಕಿಸಿದ್ದಾರೆ. ಸಂಶೋಧನೆ, ಪರೀಕ್ಷೆ, ಮೌಲ್ಯಮಾಪನ, ರಿಪೇರಿ ಹಾಗೂ ಮರಳಿಸುವ ಉದ್ದೇಶಕ್ಕಾಗಿ 20 ವಸ್ತುಗಳ ಆಮದಿಗೆ ವಿನಾಯಿತಿ ಇದೆ.

ಚೀನಾದಿಂದ ಆಮದಾಗುವ ಸರಕುಗಳ ಪೈಕಿ ಶೇ.65ರಷ್ಟು ಎಲೆಕ್ಟ್ರಾನಿಕ್ಸ್, ಯಂತ್ರ ಹಾಗೂ ಜೈವಿಕ ರಸಾಯನಿಕಗಳದ್ದಾಗಿದೆ. ಎಲೆಕ್ಟ್ರಾನಿಕ್ ವಸ್ತುಗಳನ್ನು ಭಾರತದಲ್ಲೇ ಉತ್ಪಾದಿಸಲು ಭಾರತ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ.

# ದೆಹಲಿಯಿಂದ ಕಾಂಗ್ರೆಸ್ ಸರ್ಕಾರ ನಿಯಂತ್ರಣ

ಬೆಂಗಳೂರು, ಆ. 3 - ರಾಜ್ಯ ಸರ್ಕಾರವನ್ನು ಕಾಂಗ್ರೆಸ್ ಹೈಕಮಾಂಡ್ ದೆಹಲಿಯಿಂದ ನಿಯಂತ್ರಿಸುತ್ತಿದೆ. ಇದು ಪ್ರಜಾಪ್ರಭುತ್ವ ವಿರೋಧಿಯಾಗಿದ್ದು, ಕಾಂಗ್ರೆಸ್ ಸರ್ಕಾರವನ್ನು ಆಯ್ಕೆ ಮಾಡಿದ ರಾಜ್ಯದ ಜನತೆಗೆ ಅವಮಾನ ಮಾಡಿದಂತೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇಡೀ ಸಂಪುಟ ದೆಹಲಿಗೆ ಹೋಗಿ ಪಕ್ಷದ ಸಭೆ ನಡೆಸಿರುವುದು ರಾಜ್ಯದ ಇತಿಹಾಸದಲ್ಲಿ ನಡೆದಿರಲಿಲ್ಲ. ಇದು ಪ್ರಜಾಪ್ರಭುತ್ವ ವಿರೋಧಿ ನಡೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡದ ಅಸ್ಮಿತೆಯ ಬಗ್ಗೆ ಮಾತನಾಡುತ್ತಿದ್ದರು. ಈಗ ಇಡೀ ಸಂಪುಟವನ್ನೇ ದೆಹಲಿಗೆ ಕರೆದುಕೊಂಡು ಹೋಗಿ ಕನ್ನಡದ ಅಸ್ಮಿತೆಗೆ ಧಕ್ಕೆ ತಂದಿದ್ದಾರೆ. ಸಂಪುಟ ರಾಜ್ಯದಲ್ಲಿ ಸರ್ವೋಚ್ಚವಾಗಿದೆ. ಅಂತಹ ಸಂಪುಟವನ್ನೇ ಹೈಕಮಾಂಡ್‌ಗೆ ವರದಿ ನೀಡುವಂತೆ ಮಾಡಲಾಗಿದೆ. ಸಂಪುಟದ ಪರಮೋಚ್ಛತೆಯನ್ನು ಹೈಕಮಾಂಡ್‌ಗೆ ಅಡಿ



ಯಾಳಾಗಿ ಇಟ್ಟಂತಾಗಿದೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ಮೊದಲ ಹಾಗೂ ಎರಡನೇ ಅವಧಿ ಆಡಳಿತದಲ್ಲಿ ವ್ಯತ್ಯಾಸ ಇದೆ. ಸಿದ್ದರಾಮಯ್ಯಗೆ ಆಡಳಿತದ ಮೇಲಿನ ಹಿಡಿತ ತಪ್ಪಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಸರ್ಕಾರದ ಆರಂಭದಲ್ಲಿಯೇ ಇಲ್ಲಿ ಅಧಿಕಾರಿಗಳ ಸಭೆ ನಡೆಸಿದ್ದರು. ಶಾಸಕಾಂಗ ಸಭೆಯಲ್ಲಿಯೂ ಶಾಸಕರು ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಟ್ಟಿಲ್ಲ. ವರ್ಗಾವಣೆ ಮಾಡುವ ದಂಧೆ, ಸ್ವಜನ ಪಕ್ಷಪಾತ ಅವ್ಯಾಹತವಾಗಿ ನಡೆಯುತ್ತಿದೆ. ಕಾನೂನು ಸುವ್ಯವಸ್ಥೆ ಸರಿ ಇಲ್ಲದ ಸಂದರ್ಭದಲ್ಲಿ ಪ್ರವಾಹ, ಬರ ಇರುವ ಸಂದರ್ಭದಲ್ಲಿ ರಾಜ್ಯದಲ್ಲಿ ಆಡಳಿತ ವೈಫಲ್ಯತೆ ಕಾಣಿಸುತ್ತಿದೆ ಎಂದರು.

ಬಿಜೆಪಿ ಅವಧಿಯ ಅಕ್ರಮಗಳ ಬಗ್ಗೆ ಮಾತನಾಡುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ ಲೋಕಾಯುಕ್ತ ತನಿಖೆ ನಡೆಯುತ್ತಿದೆ. ಈ ಬಗ್ಗೆ ಉತ್ತರ ನೀಡಲಿ. ನಮ್ಮ ಅವಧಿಯಲ್ಲಿ ಅಭಿವೃದ್ಧಿಗೆ ಬಿಡುಗಡೆಯಾದ ಹಣ ತಡೆ ಹಿಡಿದಿದ್ದಾರೆ. ಇದರಿಂದ ಯಾವುದೆ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಎಂದರು.

ಪರಿಶಿಷ್ಟರ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆ ಮಾಡಿದ್ದು ಸರ್ಕಾರದ ದಲಿತ ವಿರೋಧಿ ನೀತಿ ತೋರಿಸುತ್ತದೆ. ಪರಿಶಿಷ್ಟರ ಯೋಜನೆಗೆ ಮೀಸಲಿಟ್ಟ 34 ಸಾವಿರ ಕೋಟಿ ರೂ. ಅನುದಾನದಲ್ಲಿ ಸುಮಾರು 13 ಸಾವಿರ ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ದಲಿತರ ಅಭಿವೃದ್ಧಿಗೆ ಹೊಡೆತ ಬೀಳಲಿದೆ. ಇದು ಕಾಂಗ್ರೆಸ್‌ನ ದಲಿತ ವಿರೋಧಿ ನೀತಿಯನ್ನು ತೋರಿಸುತ್ತದೆ ಎಂದು ಕಿಡಿಕಾರಿದರು.

# ಜಗಳೂರಿನಲ್ಲಿ ನಿವೃತ್ತ ಯೋಧನಿಗೆ ಅದ್ದೂರಿ ಸ್ವಾಗತ



ಜಗಳೂರು, ಆ.3- ತಾಲ್ಲೂಕಿನ ಕಾನನಕಟ್ಟೆ ಗ್ರಾಮದ ಸಿಆರ್‌ಪಿಎಫ್ ಯೋಧ ಪಿ.ವಿರುಪಾಕ್ಷಿ ಅವರು ನಿವೃತ್ತಿಯಾದ ಹಿನ್ನೆಲೆಯಲ್ಲಿ ಅದ್ದೂರಿ ಮೆರವಣಿಗೆಯೊಂದಿಗೆ ಸ್ವಾಗತಿಸಲಾಯಿತು.

ಅಂಬೇಡ್ಕರ್ ವೃತ್ತದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬಾಲ್ಯದ ಕನಸಿನಂತೆ 2002 ಫೆಬ್ರವರಿ 15 ರಂದು ಸಿಆರ್‌ಪಿಎಫ್ ಯೋಧನಾಗಿ ನೇಮಕಗೊಂಡ ನಾನು, 20 ವರ್ಷಗಳ ಕಾಲ ಮಹರಾಷ್ಟ್ರ, ಶ್ರೀನಗರ, ಅಂಡಮಾನ್ ನಿಕೋಬಾರ್, ತೆಲಂಗಾಣ, ಛತ್ತೀಸ್ ಘಡ್ ಸೇರಿದಂತೆ ನಕ್ಸಲ್ ಏರಿಯಾಗಳಲ್ಲಿ ಸೇವೆ ಸಲ್ಲಿಸಿದ ನೆಮ್ಮದಿ ನನಗಿದೆ ಎಂದು ಹೇಳಿದರು.

ಮುಂದಿನ ದಿನಗಳನ್ನು ಕೃಷಿ ಚಟುವಟಿಕೆಯಲ್ಲಿ ತೊಡಗಿ ಕೊಳ್ಳುವುದಾಗಿ ಹೇಳಿದರು. ಇದೇ ವೇಳೆ ಶಾಸಕ ಬಿ.ದೇವೇಂದ್ರಪ್ಪ ಅವರು ಸ್ವಾಗತಿಸಿ, ಶುಭ ಕೋರಿದರು. ಈ ಸಂದರ್ಭ ದಲ್ಲಿ ತಾಲ್ಲೂಕು ಅರೆ ಸೇನಾ ಸಮಿತಿಯ ಪದಾಧಿಕಾರಿ ಗಳಾದ ರಂಗಸ್ವಾಮಿ, ಪ್ರಹ್ಲಾದ ರೆಡ್ಡಿ, ಮುಖಂಡರಾದ ಕೃಷ್ಣಮೂರ್ತಿ, ವಕೀಲ ಆರ್.ಓಬಳೇಶ್, ಕಾನನಕಟ್ಟೆ ತಿಪ್ಪೇಸ್ವಾಮಿ, ಕುಮಾರ್ ಹೇಮಾರೆಡ್ಡಿ ಇತರರು ಇದ್ದರು.

## ಪ್ರಧಾನಿ ಭೇಟಿ ಮಾಡಿದ ಸಿಎಂ

**(1ನೇ ಪುಟದಿಂದ)** ಪರಿಹಾರದ ಬಾಬ್ತನ್ನು ಕೂಡಲೇ ಬಿಡುಗಡೆ ಮಾಡುವಂತೆಯೂ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿಯವರು ಪ್ರಧಾನಿ ಅವರನ್ನು ಭೇಟಿಯಾದ ತಕ್ಷಣವೇ ಹೂ ಗುಚ್ಛ ನೀಡಿ ಹುಟ್ಟಿದ ಹಬ್ಬದ ಶುಭಾಶಯ ಕೋರಿ, ಹೊಸದಾಗಿ ಮುಖ್ಯಮಂತ್ರಿಯ ಅಧಿಕಾರ ಹೇಗಿದೆ ಎಂದು ಪ್ರಶ್ನಿಸಿದ್ದಾರೆ.

ಇದ್ದ ಅಲ್ಪ ಸಮಯದಲ್ಲೇ ರಾಜ್ಯದ ಸಮಸ್ಯೆಗಳನ್ನು ಪ್ರಧಾನಿ ಅವರ ಗಮನಕ್ಕೆ ತಂದಿದ್ದಾರೆ. ಆದರೆ, ಅವರಿಂದ ಯಾವುದೇ ಸ್ಪಷ್ಟ ಭರವಸೆಗಳು ದೊರೆತಿಲ್ಲ.

ಕೆಲವು ವಿಚಾರಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತರುವು ದಾಗಿ ತಿಳಿಸಿದ್ದಾರೆ. ವಿವಿಧ ಯೋಜನೆಗಳಡಿ ಕರ್ನಾಟಕಕ್ಕೆ ಬರಬೇಕಾಗಿರುವ ಬಾಕಿ ಅನುದಾನವನ್ನು ಬಿಡುಗಡೆ ಮಾಡುವಂತೆ ಇದೇ ಸಂದರ್ಭದಲ್ಲಿ ಪ್ರಧಾನಿ ಅವರನ್ನು ಮುಖ್ಯಮಂತ್ರಿ ಕೋರಿದ್ದಾರೆ.

ನೀರಾವರಿ ಯೋಜನೆಗಳು, ಜಲಜೀವನ್ ಮಿಷನ್ ಹಾಗೂ ನರೇಗಾ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವಂತೆಯೂ ಮನವಿ ಮಾಡಿದ್ದಾರೆ.

ಪ್ರಧಾನಿ ಭೇಟಿಯ ನಂತರ ಕೇಂದ್ರ ಸಚಿವರಾದ ರಾಜನಾಥ್‌ಸಿಂಗ್, ನಿತಿನ್ ಗಡ್ಕರಿ, ನಿರ್ಮಲ ಸೀತರಾಮನ್ ಅವರನ್ನು ಸಂಸತ್‌ಭವನದಲ್ಲೇ ಭೇಟಿಯಾಗಿ ಅವರವರ ಇಲಾಖೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಯೋಜನೆಗಳ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಐತಿಹಾಸಿಕ ಮೈಸೂರು ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಿರುವ ಸರ್ಕಾರ, ದಸರೆಗೆ ಕಳೆಕಟ್ಟಲು ಏರ್ ಶೋ ಏರ್ಪಡಿಸುವಂತೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಅವರನ್ನು ಭೇಟಿ ಮಾಡಿದ ಅವರು, ಮೈಸೂರು ದಸರಾದಲ್ಲಿ ಏರ್ ಶೋ ನಡೆಸಲು ಕ್ರಮ ಕೈಗೊಳ್ಳಬೇಕು. ಆ ಮೂಲಕ ಮೈಸೂರು ನಗರದ ಸಾಂಸ್ಕೃತಿಕ ಮಹತ್ವದ ಜತೆ ಆರ್ಥಿಕ ಮಹತ್ವವನ್ನೂ ಪಡೆದಂತಾಗುತ್ತದೆ ಎಂದು ಹೇಳಿದ್ದಾರೆ. ದಸರೆಯಲ್ಲಿ ಏರ್ ಶೋ ನಡೆಸುವ ಕುರಿತು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಬಳಿ ವಿವರ ಪಡೆದ ರಾಜನಾಥಸಿಂಗ್, ಇದಕ್ಕೆ ಪೂರಕವಾಗಿ ಪ್ರತಿಕ್ರಿಯಿಸಿದ್ದಾರೆ.

## ಜ್ಞಾನವಾಪಿ ಸಮೀಕ್ಷೆಗೆ ಅನುಮತಿ

**(1ನೇ ಪುಟದಿಂದ)** ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಹೈಕೋರ್ಟ್ ಅನುಮತಿ ನೀಡಿದ ನಂತರ ಸುಪ್ರೀಂ ಕೋರ್ಟ್‌ನಲ್ಲಿ ಅಂಜುಮನ್ ಇಂತಜಮಿಯಾ ಮಸ್ಜಿದ್ ಸಮಿತಿ ಅರ್ಜಿ ದಾಖಲಿಸಿದೆ.

ಜಿಲ್ಲಾ ನ್ಯಾಯಾಲಯದ ಅರ್ಜಿ ನ್ಯಾಯೋಚಿತವಾಗಿದೆ. ಇದರಲ್ಲಿ ಹೈಕೋರ್ಟ್ ಮಧ್ಯ ಪ್ರವೇಶದ ಅಗತ್ಯವಿಲ್ಲ. ಪುರಾತತ್ವ ಸಮೀಕ್ಷೆಯಿಂದ ಮಸೀದಿಯ ವಿನ್ಯಾಸಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಮಸೀದಿ ಆವರಣದಲ್ಲಿ ಗುಂಡಿ ತೆಗೆಯಲು ಅವಕಾಶವಿಲ್ಲ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರೀತಿಂಕರ್ ದಿವಾಕರ್ ನೇತೃತ್ವದ ಪೀಠ ಹೇಳಿದೆ.

## ಕಲುಷಿತ ನೀರಿನಲ್ಲಿ ವಿಷಕಾರಿ ಅಂಶಗಳಿಲ್ಲ

**(1ನೇ ಪುಟದಿಂದ)** ಸಂಬಂಧಿಸಿದಂತೆ ನೀರು ಪೂರೈಕೆ ಸಹಾಯಕರೊಬ್ಬರನ್ನು ಅಮಾನ ತ್ತುಗೊಳಿಸಲಾಗಿದೆ. ನೀರುಗಂಟಿ ಸೇವೆ ಸಲ್ಲಿಸುತ್ತಿದ್ದ ಇಬ್ಬರನ್ನು ಸೇವೆಯಿಂದ ವಜಾಗೊಳಿಸ ಲಾಗಿದೆ. ಇಬ್ಬರು ಎಂಜಿನಿಯರು ಗಳನ್ನು ಅಮಾನತ್ತು ಮಾಡಲೂ ಸಹ ಜಿಲ್ಲಾಧಿಕಾರಿ ಶಿಫಾರಸ್ಸು ಮಾಡಿದ್ದಾರೆ.

ಕವಾಡಿಗರಹಟ್ಟಿಗೆ ಪೂರೈಕೆ ಯಾಗಿದ್ದ ನೀರು ಕುಡಿಯಲು ಯೋಗ್ಯವಾಗಿರಲಿಲ್ಲ ಎಂದು ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಘಟಕ ವರದಿ ನೀಡಿದೆ. ಕಲುಷಿತ ನೀರು ಕುಡಿದು ಅಸ್ವಸ್ಥರಾದವರ ಮಲದ ಮಾದರಿಯಲ್ಲಿ ಕಾಲರಾ ಹರಡಬಹುದಾದ ಸೂಕ್ಷ್ಮಾಣು ಸಹ ಪತ್ತೆಯಾಗಿದೆ.

## ಶಂಕಿತರನ್ನು ಬಂಧಿಸಲು ಹೋಗಿ ತಾವೇ ವಶಕ್ಕೊಳಗಾದ ಪೊಲೀಸರು

ನವದೆಹಲಿ, ಆ. 3 - ಇಬ್ಬರು ಶಂಕಿತರನ್ನು ಬಂಧಿಸಲು ಕೇರಳಕ್ಕೆ ತೆರಳಿದ್ದ ಕರ್ನಾಟಕದ ನಾಲ್ವರು ಪೊಲೀಸರೇ ಬಂಧನಕ್ಕೆ ಒಳಗಾದ ಘಟನೆ ನಡೆದಿದೆ. ಕರ್ನಾಟಕದ ಪೊಲೀಸರು ಲಂಚ ಪಡೆಯುತ್ತಿದ್ದರೆಂದು ಆರೋಪಿಸಲಾಗಿದೆ.

ಶಂಕಿತರನ್ನು ಬಂಧಿಸದೇ ಇರುವುದಕ್ಕೆ ಲಂಚ ಕೇಳಲಾಗಿದೆ ಎಂದು ಶಂಕಿತರ ಸಂಗಾತಿಯೊಬ್ಬರು ಕೇರಳ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ನಂತರ ಕೊಚ್ಚಿ ಜಿಲ್ಲೆಯಲ್ಲಿ ಕರ್ನಾಟಕದ ಪೊಲೀಸರನ್ನು ಬಂಧಿಸಲಾಗಿದೆ.

ಆನ್‌ಲೈನ್ ಕ್ರಿಪ್ಟೋಕರೆನ್ಸಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಖಿಲ್ ಹಾಗೂ ನಿಖಿಲ್ ಎಂಬುವವರನ್ನು ಬಂಧಿಸಲು ಕಳೆದ ಆಗಸ್ಟ್ 1ರಂದು ಕರ್ನಾಟಕ ಪೊಲೀಸರ ತಂಡ ಕೇರಳಕ್ಕೆ ತೆರಳಿತ್ತು.

ಉಭಯರನ್ನು ಬಂಧಿಸಿದ್ದ ಪೊಲೀಸರು, ಇಬ್ಬರೂ ತಲಾ 25 ಲಕ್ಷ ರೂ. ಕೊಟ್ಟರೆ ಬಿಡುವುದಾಗಿ ಹೇಳಿದರು. ಓರ್ವ ಆರೋಪಿ 1 ಲಕ್ಷ ರೂ. ಹಾಗೂ ಇನ್ನೊರ್ವ 2.95 ಲಕ್ಷ ರೂ. ನೀಡಿದ್ದ ಎನ್ನಲಾಗಿದೆ. ಈ ಬೆಳವಣಿಗೆಯಿಂದ ಬೇಸರಗೊಂಡ ಇವರ ಪೈಕಿಯ ಸಂಗಾತಿಯೊಬ್ಬರು, ಕೇರಳ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ನಂತರ ಕ್ರಮ ತೆಗೆದುಕೊಂಡ ಕೇರಳ ಪೊಲೀಸರು, ಕರ್ನಾಟಕದ ಪೊಲೀಸರನ್ನು ವಶಕ್ಕೆ ತೆಗೆದುಕೊಂಡು ಅವರ ವಾಹನದಿಂದ 3.95 ಲಕ್ಷ ರೂ. ನಗದು ಪತ್ತೆ ಮಾಡಿದ್ದಾರೆ. ಈ ಪ್ರಕರಣದ ತನಿಖೆ ನಡೆಸಲಾಗುತ್ತಿದೆ.

# ಶಿಕ್ಷಣ ಇಲಾಖೆ ಗಮಕ ಶಿಕ್ಷಕರನ್ನು ನೇಮಿಸಲಿ

## ಹರಿಹರ: ದತ್ತಿ ಗಮಕ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ರಾಜಶೇಖರಯ್ಯ



ಹರಿಹರ,ಆ. 3- ಯುವಕರಿಂದ ಹಿಡಿದು, ವೃದ್ಧರೂ ಸಹ ಗಮಕವನ್ನು ಕಲಿತು, ಉಳಿಸಿ ಬೆಳೆಸಬಹುದೆಂದು ಹರಪನಹಳ್ಳಿ ಎ.ಡಿ.ಬಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎ. ಎಂ. ರಾಜಶೇಖರಯ್ಯ ಸಲಹೆ ನೀಡಿದರು.

ನಗರದ ಹರಿಹರೇಶ್ವರ ಸಭಾಂಗಣದಲ್ಲಿ ಲಕ್ಷ್ಮೀಶ ಕಲಾ ಸಂಘ ಹಮ್ಮಿಕೊಂಡಿದ್ದ, ಸಂಘದ ವಾರ್ಷಿಕೋತ್ಸವ ಹಾಗೂ ಕಲಾಶ್ರೀ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ದತ್ತಿ ಗಮಕ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಗಮಕ ಕಲಿತವರು ಹಲವಾರು ರೀತಿಯಲ್ಲಿ ಉನ್ನತ ಸ್ಥಾನ ಗಳಿಸಿದ್ದಾರೆ. ಇಂದಿನ ಶಿಕ್ಷಕರೂ ಸಹ ಗಮಕ ಕಲಿತು ಹಳಗನ್ನಡ ಪದ್ಯಗಳನ್ನು ಬೋಧಿಸಬೇಕು.

ಶಿಕ್ಷಣ ಇಲಾಖೆಯು ಸಹ ಗಮಕ ಶಿಕ್ಷಕರನ್ನು ನೇಮಿಸಬೇಕು ಅಥವಾ ಸಂಗೀತ ಪರಿಚಯವಿರುವ ಭಾಷಾ ಶಿಕ್ಷಕರಿಗೆ ಗಮಕ ತರಬೇತಿ ನೀಡಬೇಕೆಂದು ಒತ್ತಾಯಿಸಿದರು.

ದತ್ತಿ ಅಂಗವಾಗಿ ತುಮಕೂರಿನಿಂದ ಆಗಮಿಸಿದ ಸಾವಿತ್ರಿ ಸತ್ಯೇಂದ್ರ ಅವರು ಮಹಾಭಾರತದ ಕೃಷ್ಣ ಸಂಧಾನದ ಭಾಗವನ್ನು ಸುಶ್ರಾವ್ಯವಾಗಿ ವಾಚಿಸಿದರೆ, ತುಮಕೂರಿನಿಂದಲೇ ಆಗಮಿಸಿದ ಎಸ್ಎಸ್ಐವಿಎಂ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಪಾವಗಡ ರೇಣುಕಾ ಪ್ರಸಾದ್ ಅವರು ವ್ಯಾಖ್ಯಾನಿಸಿದರು.

ಸಮೃದ್ಧವಾದ ಅವಕಾಶ ಮತ್ತು ಸೌಲಭ್ಯಗಳಿದ್ದು, ಅವುಗಳನ್ನು ಮಕ್ಕಳು ಸದುಪಯೋಗಪಡಿಸಿಕೊಳ್ಳುವಂತೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಂ.ಕೆ.ಟಿ. ಪ್ರೌಢಶಾಲೆಯ ವಿಶ್ರಾಂತ ಮುಖ್ಯೋಪಾಧ್ಯಾಯ ವಿನೋದ್ ಎಸ್. ಹೆಗಡೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗಮಕಿಗಳಾದ ಸುಜಾತಾ ಗೋಪಿನಾಥ್ ಹಾಗೂ ಉಮಾ ಭಟ್ ಶಿಷ್ಯ ಬಳಗದವರು ದಾಸವಾಣಿ ಕಾರ್ಯಕ್ರಮ ನಡೆಸಿಕೊಟ್ಟರು.

ಲಕ್ಷ್ಮೀಶ ಕಲಾ ಸಂಘದ ಅಧ್ಯಕ್ಷ ಎಸ್. ಹೆಚ್. ಹೂಗಾರ್ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಅಮೂಲ್ಯ ಎಸ್. ಕಟ್ಟಿ ಪ್ರಾರ್ಥಿಸಿದರು. ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ.ಕೊಟ್ರೇಶ್ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷೆ ಚಂದ್ರಕಲಾ ಸುರೇಶ್ ನಾಯಕ್ ಪ್ರಸ್ತಾವನೆ ಮಾಡಿದರು. ಉಮಾ ಭಟ್ ಕಾರ್ಯಕ್ರಮ ನಿರೂಪಿಸಿದರೆ, ಎ.ಬಿ ಮಂಜಮ್ಮ ವಂದಿಸಿದರು.

# ಬಡವರ ಪಾಲಿನ ಭಾಗ್ಯವಿಧಾತ ದೇಶದ ನಂಬರ್ ಒನ್ ಮುಖ್ಯಮಂತ್ರಿ ಸಿದ್ದರಾಮಯ್ಯ



ದಾವಣಗೆರೆ, ಆ. 3- ನುಡಿದಂತೆ ನಡೆಯುವ ಜನನಾಯಕ ಬಡವರ ಪಾಲಿನ ಭಾಗ್ಯವಿಧಾತ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಕಾರ್ಯಶೈಲಿಯಿಂದ ದೇಶದ ನಂಬರ್ ಒನ್ ಮುಖ್ಯಮಂತ್ರಿ ಆಗಿದ್ದಾರೆಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸಿದ್ದರಾಮಯ್ಯನವರನ್ನು ಕೊಂಡಾಡಿದರು.

ಪಾಲಿಕೆ ಮುಂಭಾಗದಲ್ಲಿ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಹಾಗೂ ಕಾಂಗ್ರೆಸ್ ಮುಖಂಡರು ಇಂದು ಹಮ್ಮಿಕೊಂಡಿದ್ದ ಸಿದ್ದರಾಮಯ್ಯನವರ ಹುಟ್ಟು ಹಬ್ಬ ಕಾರ್ಯಕ್ರಮದಲ್ಲಿ ಸಿಹಿ ವಿತರಿಸಿ ಮಾತನಾಡಿದರು.

ಸಿದ್ದರಾಮಯ್ಯನವರು ನೂರು ಕಾಲ ಬಾಳಲಿ, ರಾಜ್ಯವನ್ನು ಉತ್ತುಂಗಕ್ಕೆ ಕೊಂಡಯ್ಯಲ್ಲೆಂದು ಆಶಿಸಿದರು.

ಈ ಸಂದರ್ಭದಲ್ಲಿ ಪಾಲಿಕೆಯ ಸದಸ್ಯರುಗಳಾದ ಕೆ. ಚಮನ್ ಸಾಬ್, ಎ.ನಾಗರಾಜ್, ಗಡಿಗುಡಾಳ್ ಮಂಜುನಾಥ್, ನಾಗರಾಜ್, ಉದಯಕುಮಾರ್, ಉಮೇಶ್, ಎಸ್. ಮಲ್ಲಿಕಾರ್ಜುನ್, ಬಾಬುರಾವ್ ಸಾಳಂಕಿ, ಭಾರತ್ ಕಾಲೋನಿ ಜಗದೀಶ್, ಕೆ.ಜಿ. ರಹಮತ್ತುಲ್ಲಾ, ಬಿ.ಹೆಚ್. ಉದಯ ಕುಮಾರ್, ಮಾರುತಿ, ಹನುಮಂತಪ್ಪ, ಚೈತನ್ಯ ಕುಮಾರ್, ಸುರೇಶ್ ಬಿ.ಎಸ್., ಮಧು ಶಾಮನೂರು, ಸಾಗರ್ ಸೇರಿದಂತೆ ಇತರರು ಹಾಜರಿದ್ದರು.

## ಹರಿಹರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ

ಹರಿಹರ, ಆ.3- ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಮತ್ತು ಡಿಪ್ಲೋಮಾ ಇನ್ ಆಟೋಮೇಷನ್ ಅಂಡ್ ರೋಬೋಟಿಕ್ಸ್ ಕೋರ್ಸ್‌ಗೆ ಎಸ್ಸೆಸ್ಸೆಲ್ಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 22 ಸಿ ಮತ್ತು ಡಿ. ಕೆ.ಐ.ಎ.ಡಿ.ಬಿ, ಕೈಗಾರಿಕಾ ಪ್ರದೇಶ ಹರ್ಲಾಪುರ, ಹರಿಹರ - 577601 ಅಥವಾ ಮೊ. ನಂ: 9845941245, 8711913947.

ಬಾಡಿಗೆಗೆ ಇದೆ TO-LET
ನೆಲ ಮಹಡಿ : 3,500 ಚ.ಅಡಿ, ಕಮರ್ಷಿಯಲ್
ಮೊದಲನೆ ಮಹಡಿ : 3,500 ಚ.ಅಡಿ, ಕಮರ್ಷಿಯಲ್
ಎರಡನೇ ಮಹಡಿ : 3,500 ಚ.ಅಡಿ, ಕಮರ್ಷಿಯಲ್
Customize to
ಅಲ್ ಆಫೀಸ್, ಶಾಪ್ ಅಥವಾ ಹಾಸ್ಪಿಟಲ್
Mob : 9448339413
N.R. Road, Davanagere.

# ಮುಂಗಾರು ಬೆಳೆ ನಿರ್ವಹಣೆ ಕುರಿತು ರೈತರಿಗೆ ಆನ್‌ಲೈನ್ ತರಬೇತಿ

## ಡಾ.ಆರ್.ಜಿ. ಗೊಲ್ಲರ್, ಡಾ.ಎಂ.ಎ. ಬಸವಣ್ಣೆಪ್ಪ, ಡಾ. ಶ್ರೀನಿವಾಸ್ ಚಿಂತಾಲ್ ಅವರಿಂದ ಉಪಯುಕ್ತ ಮಾಹಿತಿ

ದಾವಣಗೆರೆ, ಆ.3- ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ವತಿಯಿಂದ ಕಳೆದ 31ರಂದು ಆನ್‌ಲೈನ್ ತರಬೇತಿ ಕಾರ್ಯಕ್ರಮ ನಡೆಯಿತು.

ನಿವೃತ್ತ ಜಂಟಿ ಕೃಷಿ ನಿರ್ದೇಶಕ ಡಾ.ಆರ್.ಜಿ. ಗೊಲ್ಲರ್, ಸಾವಯವ ಕೃಷಿ ಸಂಶೋಧನಾ ಕೇಂದ್ರ ಕೃಷಿ ವಿಶ್ವವಿದ್ಯಾಲಯ ರಾಯಚೂರು ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಆದ ಡಾ.ಎಂ.ಎ. ಬಸವಣ್ಣೆಪ್ಪ, ಮತ್ತು ಜಂಟಿ ಕೃಷಿ ನಿರ್ದೇಶಕ ಡಾ. ಶ್ರೀನಿವಾಸ್ ಚಿಂತಾಲ್, ತರಬೇತಿಯಲ್ಲಿ ಅನೇಕ ರೈತರ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಮಳೆಯು ತಡವಾಗಿ ಬಂದಿದ್ದರಿಂದ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ, ತೊಗರಿ ಮತ್ತು ಭತ್ತದ ಬೆಳೆಗಳನ್ನು ತಡವಾಗಿ ಬಿತ್ತಿದ್ದು, ಕಳೆದ ಎರಡು ವಾರ ಬಿಡುವಿಲ್ಲದೆ ಸುರಿದ ಮಳೆಯಿಂದ ಹಸಿಯು ಜಾಸ್ತಿಯಾಗಿ ಮುಸುಕಿನ ಜೋಳದಲ್ಲಿ ಶೀತ ಬಾಧೆಯಿಂದ ಬೆಳೆಯು ನೇರಳೆ/ಹಳದಿ ಬಣ್ಣಕ್ಕೆ ತಿರುಗಿವೆ. ಬೆಳೆ ಚೇತರಿಸಿಕೊಳ್ಳಲು ನೀರಿನಲ್ಲಿ ಕರಗುವ ರಾಸಾಯನಿಕ ಗೊಬ್ಬರಗಳಾದ 13-0-45 ಮತ್ತು 19-19-19 ಇವುಗಳನ್ನು ಪ್ರತಿ ಲೀಟರ್ ನೀರಿಗೆ ಸಣ್ಣ ಬೆಳೆ ಇದ್ದಲ್ಲಿ 2 ಗ್ರಾಂ ಹಾಗೂ ದೊಡ್ಡ ಬೆಳೆ ಇದ್ದಲ್ಲಿ 5ಗ್ರಾಂ ನಂತೆ ಬೆರೆಸಿ 12 ರಿಂದ 15 ದಿನಗಳ ಅಂತರದಲ್ಲಿ ಸಿಂಪಡಿಸಿದರೆ ಅಧಿಕ ಇಳುವರಿ ಪಡೆಯಬಹುದು.

ಎಡೆ ಹೊಡೆದು ಬೋದು ನಿರ್ಮಿಸುವುದು. ಯೂರಿಯಾ, ಎಂಓಪಿಗಳನ್ನು ಎಡೆ ಹೊಡೆಯುವಾಗ ಎಳೆ ಶೆಡ್ಡಿ ಮೂಲಕ ಕೊಡಲು ಸಲಹೆ ನೀಡಲಾಯಿತು. ಜಮೀನುಗಳಲ್ಲಿ ನೀರು ಬಸಿದು ಹೋಗುವಂತೆ ನೀರಿನ ದಾರಿ ಕಲ್ಪಿಸಲು ಸಲಹೆ ನೀಡಲಾಯಿತು.

ಮುಸುಕಿನ ಜೋಳದಲ್ಲಿ ಸೈನಿಕ ಹುಳು ಬಾಧೆ ನಿರ್ವಹಣೆಗೆ ಅರ್ಧ ಗ್ರಾಂ ಇಮಾಮ್ಯಾಕ್ಟಿನ್‌ಬೆಂ ಜೋಯೇಟ್ ಕೀಟನಾಶಕ ವನ್ನು ಪ್ರತಿ ಲೀಟರ್ ನೀರಿಗೆ



ಬೆರೆಸಿ ಸುಳಿಯಲ್ಲಿ ತುಂಬುವಂತೆ ಸಿಂಪಡಿಸುವುದು. ಅಲ್ಲದೆ ಮೆಟಾರೈಜಿಯಂ ರಿಲೇ ಜೈವಿಕ ಪೀಡೆನಾಶಕವನ್ನು ಪ್ರತಿ ಲೀಟರ್ ನೀರಿಗೆ 3 ಗ್ರಾಂ ಬೆರಿಸಿ ಸುಳಿಯಲ್ಲಿ ಬಿಡುವುದರಿಂದ 4 ರಿಂದ 5 ದಿನಗಳಲ್ಲಿ ಸೈನಿಕ ಹುಳು ನಿಯಂತ್ರಣ ಆಗುವುದು.

ಮೆಕ್ಕೆ ಜೋಳವನ್ನು ಇನ್ನೂ ಮುಂದೆ ಕೂಡ ಬಿತ್ತಬೇಕೋ ಬೇಡವೋ ಎಂಬ ಪ್ರಶ್ನೆಗೆ, ಎಲ್ಲಿ ನೀರಿನ ವ್ಯವಸ್ಥೆ ಇದೆಯೋ ಅಲ್ಲಿ ಬಿತ್ತನೆ ಮಾಡಬಹುದು. ಹಿಂಗಾರು ಮಳೆ ಉಪಯೋಗಿಸಿ ಕೊಂಡು ಪೋಷಕಾಂಶ ನಿರ್ವಹಣೆ ಮಾಡುವು ದರಿಂದ ಬೆಳೆಯನ್ನು ಬೆಳೆಯ ಬಹುದು. ಪೊಟ್ಯಾಷ್ ಗೊಬ್ಬರವನ್ನು ಮೂಲ ಗೊಬ್ಬರವಾಗಿ ಕಡ್ಡಾಯವಾಗಿ ನೀಡಬೇಕೆಂದು ಸಲಹೆ ನೀಡಿದರು.

ಎಲ್ಲಾ ಬೆಳೆಗಳಿಗೂ ಬೀಜಗಳನ್ನು ಬಿತ್ತನೆಗೆ ಮೊದಲು ಪ್ರತಿ ಕೆಜಿ ಬೀಜಕ್ಕೆ 3 ಮಿಲಿ ಕ್ಲೋರೋಫೈರಿಫಾಸ್-20 ಇಸಿ ಹಾಗೂ ಕಾರ್ಬನ್ ಡೈಜಿಂ 2 ಗ್ರಾಂ ದಿಂದ ಬೀಜೋಪಚಾರ ಮಾಡಿ ಬಿತ್ತುವುದರಿಂದ ರೋಗ/ಕೀಟ ಹತೋಟಿ ಮಾಡಬಹುದು.

ಮುಸುಕಿನ ಜೋಳದಲ್ಲಿ ಮುಳ್ಳು ಸಜ್ಜೆ ನಿಯಂತ್ರಣಕ್ಕೆ ಒಂದು ಎಕರೆಗೆ 1400 ಮಿಲಿ ಮೀಸೋಟ್ರಿಯಾನ್ (Mesotrion)/ 30 ಮಿಲಿ ಟೋಪ್ರೇಮೈಸಿನ್/ 36ಗ್ರಾಂ ಹಾಲೋಸಲ್ಫುರಾನ್ ಮೀಥೈಲ್( Halo-suoperaaon) + 500 ಗ್ರಾಂ ಅಟ್ರಾಜಿನ್‌ಗಳನ್ನು 300 ಲೀಟರ್ ನೀರಿನಲ್ಲಿ ಬೆರಿಸಿ ಮುಳ್ಳು ಸಜ್ಜೆ 2-3 ಎಲೆಗಳಿರುವಾಗ ಸಿಂಪಡಿಸುವುದರಿಂದ ಸಂಪೂರ್ಣವಾಗಿ ಕಳೆ ನಿಯಂತ್ರಿಸಬಹುದೆಂದು ತಿಳಿಸಿದರು.

### ಪ್ರಮುಖ ಸಲಹೆಗಳು

- ✦ ಭತ್ತಕ್ಕೆ ಸಂಬಂಧಿಸಿದಂತೆ ಆರ್‌ಎನ್‌ಆರ್ ತಳಿಯನ್ನು ಆಗಸ್ಟ್ ಮೊದಲನೇ ವಾರದವರೆಗೂ ನಾಟಿ ಮಾಡಬಹುದು.
- ✦ ಚೆಲ್ಲು ಪದ್ಧತಿ ಭತ್ತ ಬಿತ್ತನೆಗೆ ತಡವಾಗಿದ್ದು, ಇಳುವರಿ ಕುಂಠಿತವಾಗುವುದರಿಂದ ಚೆಲ್ಲು ಭತ್ತಕ್ಕೆ ಹೋಗದಿರುವುದು ಸೂಕ್ತ
- ✦ ಮೆಕ್ಕೆ ಜೋಳದಲ್ಲಿ ಸೈನಿಕ ಹುಳು ಬಾಧೆ ನಿರ್ವಹಣೆ ಮಾಡಬೇಕು. ನೀರಿನ ವ್ಯವಸ್ಥೆ ಇರುವಲ್ಲಿ ಮಾತ್ರ ಮೆಕ್ಕೆ ಜೋಳ ಬಿತ್ತನೆ ಮಾಡಬೇಕು.

ಟಿಂಬ್ರೋ ಟ್ರಿಯಾನ್ ಕಳೆನಾಶಕ ಮುಳ್ಳು ಸಜ್ಜೆ ಮೇಲೆ ಪರಿಣಾಮ ಬೀರುತ್ತಿಲ್ಲವೆಂಬುದು ರೈತರ ಅಭಿಪ್ರಾಯ ಆಗಿತ್ತು ಸಂತೇಬೆನ್ನೂರು ಹೋಬಳಿಯ ರೈತರ ಅನುಭವದ ಅನ್ವಯ ಟೋಪ್ರಾಮಿಜೋನ್ ಬಳಸಿ ಮುಳ್ಳು ಸಜ್ಜೆ ಪರಿಣಾಮಕಾರಿ ಹತೋಟಿ ಮಾಡಲು ಸಮ್ಮತಿಸಲಾಯಿತು.

ಲಘು ಪೋಷಕಾಂಶಗಳನ್ನು ಯಾವುದೇ ಕಾರಣಕ್ಕೂ ಕಾಂಪ್ಲೆಕ್ಸ್ ಗೊಬ್ಬರಗಳ ಜೊತೆಗೆ ಬೆರಿಸಿ ಬೆಳೆಗೆ ನೀಡದಿರಲು ವಿಜ್ಞಾನಿಗಳು ತಿಳಿಸಿದರು.

ಶಿಫಾರಸ್ಸಿನಂತೆ ರಸಗೊಬ್ಬರ ಬಳಸುವುದು ಸೂಕ್ತ. ಒಂದು ವೇಳೆ ಹೆಚ್ಚಿನ ಪ್ರಮಾಣದಲ್ಲಿ ಪೋಷಕಾಂಶಗಳನ್ನು ನೀಡಿದರೆ ಪೋಷಕಾಂಶಗಳ ಸಮತೋಲನ ತಪ್ಪುವುದು, ಉದಾಹರಣೆ ರಂಜಕ ಅಂಶ ಹೆಚ್ಚಾದರೆ ಸತು ಮತ್ತು ಕಬ್ಬಿಣದ ಅಂಶಗಳ ಕೊರತೆ ಅಗುತ್ತದೆ.

ಪೊಟ್ಯಾಷ್ ಗೊಬ್ಬರವನ್ನು ಮೂಲ ಮತ್ತು ಮೇಲುಗೊಬ್ಬರವಾಗಿ ನೀಡಬೇಕು. ಪರಾಗಸ್ಪರ್ಶಕ್ಕೆ ಬೋರಾನ್ ಮತ್ತು ಪೊಟ್ಯಾಷ್ ಗೊಬ್ಬರಗಳ ಅವಶ್ಯಕತೆ ಇರುತ್ತದೆ. ಈ ಪೋಷಕಾಂಶಗಳ ಕೊರತೆಯಾದಲ್ಲಿ ಇಳುವರಿಯು ಗಣನೀಯ ಪ್ರಮಾಣದಲ್ಲಿ ಕುಂಠಿತವಾಗುತ್ತದೆ ಎಂದು ತಜ್ಞರು ಸಲಹೆ ನೀಡಿದರು.

ಭತ್ತಕ್ಕೆ ಸಂಬಂಧಿಸಿದಂತೆ ಆರ್‌ಎನ್‌ಆರ್ ತಳಿಯನ್ನು ಆಗಸ್ಟ್ ಮೊದಲನೆ ವಾರದವರೆಗೂ ನಾಟಿ ಮಾಡಬಹುದೆಂದು ತಿಳಿಸಿದರು.

ಆಗಸ್ಟ್ ಎರಡನೇ ವಾರದವರೆಗೂ ದಪ್ಪ ಭತ್ತದ ತಳಿಗಳಾದ ಮಧು, ಮಂಗಳಾ, ಎಂ.ಆರ್ ಸಿರೀಸ್ ತಳಿಗಳ ಭತ್ತಗಳನ್ನು ನಾಟಿಗೆ ಉಪಯೋಗಿಸಬಹುದಾದರೂ ಮಾರುಕಟ್ಟೆ ಕಡಿಮೆ ಇರುವ ಕಾರಣ ಈಗಾಗಲೇ ಲಭ್ಯವಿರುವ ಸಸಿಗಳನ್ನು ಉಪಯೋಗಿಸಿ ಕೊಂಡು ನಾಟಿ ಮಾಡುವುದು ಸೂಕ್ತ ಎಂದು ತಿಳಿಲಾಯಿತು.

ಚೆಲ್ಲು ಪದ್ಧತಿ ಭತ್ತ ಬಿತ್ತನೆಗೆ ತಡವಾಗಿದ್ದು ಒಂದು ವೇಳೆ ಭತ್ತ ಬಿತ್ತನೆ ಮಾಡಿದರೆ ಹೂವಾಡುವ ಹಂತದಲ್ಲಿ ಬೆಳೆ ಶೀತಕ್ಕೆ ಸಿಲುಕಿ ಇಳುವರಿ ಕುಂಠಿತವಾಗುವುದರಿಂದ ಚೆಲ್ಲು ಭತ್ತಕ್ಕೆ ಹೋಗದಿರಲು ತಿಳಿಸಿದರು.ಈಗಾಗಲೇ ಭತ್ತ ನಾಟಿ ತಡವಾಗಿದ್ದು ಒಂದು ತಿಂಗಳ ಸಸಿಗಳು ಲಭ್ಯವಿದ್ದಲ್ಲಿ ಗುಣಿಗೆ 4-5 ಸಸಿಗಳನ್ನು ನಾಟಿ ಮಾಡುವುದು.

ಅಗತ್ಯ ಸುರಕ್ಷತಾ ಕ್ರಮ ಅಳವಡಿಸಿ ಜೇಕು/ ಗರಿಕೆಯನ್ನು ಅಂತರವ್ಯಾಪಿ ಸಸ್ಯನಾಶಕ ಅಮೋನಿಯಂ ಸಾಲ್ಟ್ ಆಫ್ ಗ್ಲೈಫೋಸೇಟ್ 71%ಎಸ್.ಜಿ. ಸಿಂಪರಣೆಯಿಂದ ಹತೋಟಿ ಸಾಧ್ಯ ಎಂದು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಉಪ ಕೃಷಿ ನಿರ್ದೇಶಕ ಡಾ. ಆರ್. ತಿಪ್ಪೇಸ್ವಾಮಿ, ಸಹಾಯಕ ಕೃಷಿ ನಿರ್ದೇಶಕ ಡಾ.ರಫೀ ಹಾಗೂ ಅನೇಕ ಕೃಷಿ ಅಧಿಕಾರಿಗಳು ಭಾಗವಹಿಸಿದ್ದರು ಸುಮಾರು 100 ಕ್ಕೂ ಹೆಚ್ಚು ರೈತರು ಆನ್‌ಲೈನ್ ತರಬೇತಿ ಉಪಯೋಗವನ್ನು ಪಡೆದುಕೊಂಡರು.

# ಹಡಗಲಿ: ಕುಡಿವ ನೀರಿಗೆ ಚರಂಡಿ ನೀರು ರಾಜೀವ ನಗರ ನಿವಾಸಿಗಳ ಆರೋಪ



ಹೂವಿನಹಡಗಲಿ, ಆ. 3- ಪಟ್ಟಣದ ರಾಜೀವ ನಗರದಲ್ಲಿ ಕುಡಿಯುವ ನೀರಿನ ಪೈಪ್ ಲೈನಿಗೆ ಚರಂಡಿ ನೀರು ಸೇರ್ಪಡೆಯಾಗಿ ಸರಬರಾಜಾಗುತ್ತಿದ್ದರೂ ಪುರಸಭೆ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿಲ್ಲ. ಪ್ರತಿನಿತ್ಯ ಅದೇ ನೀರನ್ನು ಕುಡಿಯುತ್ತಿದ್ದು ಇದರಿಂದ ವಾಂತಿಭೇದಿ ಕಾಯಿಲೆ ಭೀತಿ ಉಂಟಾಗಿದೆ ಎಂದು ರಾಜೀವನಗರ ನಿವಾಸಿಗಳು ದೂರಿದ್ದಾರೆ.

ಕಳೆದ ಒಂದು ವರ್ಷದ ಹಿಂದೆ ಗುತ್ತಿಗೆದಾರರು ಚರಂಡಿ ನಿರ್ಮಾಣ ಕಾಮಗಾರಿಯನ್ನು ಮಾಡಿದ್ದರು. ಆದರೆ ಕಳಪೆ ದರ್ಜೆಯ ಪೈಪನ್ನು ಕುಡಿಯುವ ನೀರಿನ ಸರಬರಾಜಿಗೆ ಅಳವಡಿಸಿದ್ದರು. ತೂತುಬಿದ್ದ ಪೈಪಿಗೆ ಚರಂಡಿ ನೀರು ಬೆರೆತು ದುರ್ವಾಸನೆಯಿಂದ ಕೂಡಿದ ಕುಡಿಯುವ ನೀರು ಸರಬರಾಜಾಗುತ್ತಿತ್ತು. ಅದಕ್ಕಾಗಿ ನಳದಲ್ಲಿ ನೀರು ಬಂದು ಒಂದು ಗಂಟೆಯ ನಂತರ ನಾವು ನೀರನ್ನ ಹಿಡಿದುಕೊಳ್ಳುತ್ತಿದ್ದೇವೆ ಎಂದವರು ತಿಳಿಸಿದರು.

ಮಾಜಿ ಪುರಸಭಾ ಸದಸ್ಯ ಎಂ. ಪ್ರಕಾಶ್ ಮತ್ತು ಬಿಜೆಪಿ ಮುಖಂಡ ಎಂ. ಚಿದಾನಂದ ಇವರು ಅಧಿಕಾರಿಗಳ ಗಮನಸೆಳೆದುದರಿಂದ ಇವತ್ತು ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಗುತ್ತಿಗೆದಾರರು ಕಳಪೆ ಚರಂಡಿ ನಿರ್ಮಿಸಿದ್ದೇ ಈ ಅವಾಂತರಕ್ಕೆ ಕಾರಣವಾಗಿದೆ ಎಂದು ತಿಳಿಸಿದ ನಿವಾಸಿಗಳು ವಿಳಂಬ ಮಾಡದೆ ದುರಸ್ತಿಗೊಳಿಸಿ ಶುದ್ಧ ಕುಡಿಯುವ ನೀರನ್ನು ಸರಬರಾಜು ಗೊಳಿಸಬೇಕೆಂದವರು ವಾರ್ಡಿನ ಪುರಸಭೆ ಸದಸ್ಯರು ಮತ್ತು ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

# ಎ.ಆರ್.ಜಿ. ಕಲಾ, ವಾಣಿಜ್ಯ ಪ.ಪೂ ಕಾಲೇಜಿನಲ್ಲಿ ಇಂದು ಪ್ರತಿಭಾ ಪುರಸ್ಕಾರ

**ದಾವಣಗೆರೆ :** ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ 2023-24ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್., ಎನ್.ಸಿ.ಸಿ. ಚಟುವಟಿಕೆಗಳ ಉದ್ಘಾಟನೆ, ಸ್ವಾಗತ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಕಾಲೇಜು ಆವರಣದ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ನಡೆಯುವುದು.

ಕಾರ್ಯಕ್ರಮವನ್ನು ರಾಜ್ಯ ಪ್ರಶಸ್ತಿ ಪುರಸ್ಕೃತ ಹೆಚ್.ಬಿ. ಮಂಜುನಾಥ ಉದ್ಘಾಟಿಸುವರು. ಎ.ಜಿ. ಮಂಜುನಾಥ್ ಪ್ರತಿಭಾ ಪುರಸ್ಕಾರ ನಡೆಸಿಕೊಡುವರು. ಅತಿಥಿಗಳಾಗಿ ಡಾ. ಜಿ.ಬಿ. ಬೋರಯ್ಯ ಆಗಮಿಸುವರು. ಅಧ್ಯಕ್ಷತೆಯನ್ನು ಕೆ. ಬೊಮ್ಮಣ್ಣ ವಹಿಸುವರು.

# ಖನಿಜ ಗುತ್ತಿಗೆ ಅವಧಿ 50 ವರ್ಷಕ್ಕೆ ನಿಗದಿ

ನವದೆಹಲಿ, ಆ. 3 - ಕಡಲಾಚೆಯ ಖನಿಜಗಳ ಗುತ್ತಿಗೆ ಅವಧಿಯನ್ನು 50 ವರ್ಷಗಳಿಗೆ ನಿಗದಿ ಪಡಿಸುವ ಮಸೂದೆಗೆ ರಾಜ್ಯಸಭೆ ಅಂಗೀಕಾರ ನೀಡಿದೆ. ಮಂಗಳವಾರದಂದು ಲೋಕಸಭೆಗೆ ಮಸೂದೆಗೆ ಒಪ್ಪಿಗೆ ನೀಡಿತ್ತು. ಇದರೊಂದಿಗೆ ಸಂಸತ್ತು ಮಸೂದೆಗೆ ಒಪ್ಪಿಗೆ ನೀಡಿದಂತಾಗಿದೆ.

ಕಡಲಾಚೆಯ ಖನಿಜ (ಅಭಿವೃದ್ಧಿ ಹಾಗೂ ನಿಯಂತ್ರಣ) ಕಾಯ್ದೆಗೆ ತಿದ್ದುಪಡಿ ತರಲು ಮಸೂದೆ ಮಂಡಿಸಲಾಗಿತ್ತು. ಕಡಲಾಚೆಯ ಖನಿಜ ಉತ್ಪಾದನಾ ಗುತ್ತಿಗೆಯನ್ನು 50 ವರ್ಷಗಳಿಗೆ ನಿಗದಿ ಪಡಿಸಲು ಮಸೂದೆ ಉದ್ದೇಶಿಸಿದೆ. ಸ್ಪರ್ಧಾತ್ಮಕ ಹರಾಜು ಪ್ರಕ್ರಿಯೆ ಮೂಲಕ ಮಾತ್ರ ಖಾಸಗಿಯವರು ಕಡಲಾಚೆ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗುವುದು.

# ನಗರದಲ್ಲಿ ನಾಳೆ ಏಕರೂಪ ನಾಗರಿಕ ಸಂಹಿತೆ ಸಂವಾದ

ದಾವಣಗೆರೆ, ಆ.3- ನಗರದ ರೋಟರಿ ಭಾನಭವನದಲ್ಲಿ ನಾಡಿದ್ದು ದಿನಾಂಕ 5 ರ ಶನಿವಾರ ಸಂಜೆ 5 ಗಂಟೆಗೆ 'ಏಕರೂಪ ನಾಗರಿಕ ಸಂಹಿತೆ' ಸಂವಾದ ಏರ್ಪಡಿಸಲಾಗಿದೆ. ಅಧ್ಯಕ್ಷತೆಯನ್ನು ಹಿರಿಯ ವಕೀಲ, ಅಧಿವಕ್ತಾ ಪರಿಷತ್‌ನ ಜಿಲ್ಲಾ ಅಧ್ಯಕ್ಷರಾದ ಎಲ್. ದಯಾನಂದ್ ವಹಿಸುವರು. ಕಾರ್ಯಕ್ರಮವನ್ನು ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ಉದ್ಘಾಟಿಸುವರು. ಸಂಪನ್ಮೂಲ ವ್ಯಕ್ತಿಯಾಗಿ ಹಿರಿಯ ವಕೀಲರು, ಅಧಿವಕ್ತಾ ಪರಿಷತ್‌ನ ಕಾರ್ಯದರ್ಶಿಗಳಾದ ಲಕ್ಷ್ಮಿನಾರಾಯಣ ಎನ್.ಹೆಗಡೆ ಆಗಮಿಸುವರು. ಕಾರ್ಯಕ್ರಮದಲ್ಲಿ ಹಿರಿಯ ವಕೀಲರುಗಳಾದ ಡಿ.ಎನ್. ಬಸವರಾಜ್, ಮಂಜುನಾಥ ದೊಡ್ಡಮನಿ ಉಪಸ್ಥಿತರಿರುವರು.

# ಕೋಳಿ ಫಾರಂಗಳ ಮಾಲೀಕರಿಗೆ ನೋಟೀಸ್ ಜಾರಿ

ದಾವಣಗೆರೆ, ಆ.3- ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿರುವ ಕೋಳಿ ಫಾರಂಗಳ ಮಾಲೀಕರು ಹಾಗೂ ವ್ಯವಸ್ಥಾಪಕರಿಗೆ ಫಾರಂಗಳಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಲು ಮತ್ತು ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಲು ನೋಟಿಸ್ ಜಾರಿ ಮಾಡಲಾಗಿದೆ.

ತಾಲ್ಲೂಕಿನ ವಿವಿಧ ಗ್ರಾಮಗಳ ಕೋಳಿ ಫಾರಂಗಳಿಗೆ ಉಪ ನಿರ್ದೇಶಕರು, ತಾಂತ್ರಿಕ ಸಹಾಯಕರು ಪಶುವೈದ್ಯ ತಜ್ಞರು ಹಾಗೂ ಪಶುವೈದ್ಯರೊಂದಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಭೇಟಿ ನೀಡಿದ್ದು, ಫಾರ್ಮ್‌ಗಳಲ್ಲಿ ಕಂಡುಬಂದಿರುವ ನ್ಯೂನ್ಯತೆ ಗಳನ್ನು ಸರಿಪಡಿಸಲು ಮತ್ತು ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಲು ಮತ್ತು ತಾಂತ್ರಿಕವಾಗಿ ಹಲವು ಸಲಹಾ ಸೂಚನೆಗಳನ್ನು ಒಂದು ವಾರದೊಳಗಡೆ ಅಳವಡಿಸಿಕೊಂಡು ನೊಣಗಳ ಹಾವಳಿಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲು ಫಾರಂ ಮಾಲೀಕರು, ವ್ಯವಸ್ಥಾಪಕರಿಗೆ ಸೂಚಿಸಲಾಗಿದೆ.

ಮರು ಪರಿಶೀಲನೆ ಮಾಡಿದಾಗ ನೊಣಗಳ ಹಾವಳಿಯನ್ನು ನಿಯಂತ್ರಿಸುವಲ್ಲಿ ವಿಫಲವಾದಲ್ಲಿ ಅಂತಹ ಕೋಳಿಫಾರಂಗಳನ್ನು ಮುಚ್ಚಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಲದ್ದಿ ಹುಳು ನಿರ್ವಹಣೆಗೆ ಮೋಹಕ ಬಲೆ ಬಳಸಿ

ಜಗಳೂರು, ಆ.3- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, (ದಾವಣಗೆರೆ) ಇವರು ಜಗಳೂರು ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿ ಮುಂಚೂಣಿ ಪ್ರಾತ್ಯಕ್ಷಿಕೆ ತಾಕಿಗೆ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ತಂಡ ಭೇಟಿ ನೀಡಿತ್ತು.



ಬೇಸಾಯ ತಜ್ಞರಾದ ಮಲ್ಲಿಕಾರ್ಜುನ ಬಿ.ಓ. ಅವರು ಮಾತನಾಡುತ್ತಾ, ರೈತ ಬಾಂಧವರು ಸಮಗ್ರ ಕಳೆ ನಿರ್ವಹಣೆ ಪದ್ಧತಿ ಅನುಸರಿಸಿ ಹಾಗೂ ಲದ್ದಿ ಹುಳುವಿನ ನಿರ್ವಹಣೆಗೆ ಎಕರೆಗೆ 4-5ರಂತೆ ಮೋಹಕ ಬಲೆಗಳನ್ನು ಅಳವಡಿಸುವುದರಿಂದ ಲೆದ್ದಿ ಹುಳುವಿನ ಬಾಧೆಯನ್ನು ಕಡಿಮೆ ಮಾಡಬಹುದು. ಕೀಟದ ಭಾದೆ ಹೆಚ್ಚಾದಲ್ಲಿ Emamectin benzoate 0.4 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಬೇಕು ಎಂದು ತಿಳಿಸಿದರು. ಮೋಹಕ ಬಲೆಯ ಅಳವಡಿಕೆಯನ್ನು ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ತೋರಿಸಿಕೊಡಲಾಯಿತು.

**ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ಸಲಹೆ**

ತೊಗರಿಯಲ್ಲಿ ಎಲೆ ತಿನ್ನುವ ಕೀಟಗಳ ಬಾಧೆ ಕಂಡು ಬಂದಲ್ಲಿ Chlorpyrifos 20 % EC @ 2 ಮೀ.ಲೀ/ಲೀ ನಂತೆ ಸಿಂಪರಣೆ ಮಾಡುವುದರಿಂದ ನಿರ್ವಹಣೆ ಮಾಡಬಹುದೆಂದು ಕೇಂದ್ರದ ಸಸ್ಯ ಸಂರಕ್ಷಣಾ ವಿಜ್ಞಾನಿಗಳಾದ ಡಾ. ಅವಿನಾಶ್ ಟಿ.ಜಿ. ತಿಳಿಸಿದರು.

ಮೆಕ್ಕೆಜೋಳ ಬೆಳೆ ಸಮಗ್ರ ಪೋಷಕಾಂಶಗಳ ನಿರ್ವಹಣೆ ಹಾಗೂ ನ್ಯಾನೋ ಯೂರಿಯಾ ಬಳಕೆ ಬಗ್ಗೆ ಕೇಂದ್ರದ ಮಣ್ಣು ವಿಜ್ಞಾನಿಗಳಾದ ಹೆಚ್.ಎಂ. ಸಣ್ಣಗೌಡರ್ ಮಾಹಿತಿ ಒದಗಿಸಿದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಸೋಮನಗೌಡ್ರು, ಕರಿಬಸಪ್ಪ ಹಾಗೂ ಇತರರು ಭಾಗವಹಿಸಿದ್ದರು.


**ಮೊಳಕೆ ಕಟ್ಟಿದ ಕಾಳುಗಳು ದೊರೆಯುತ್ತವೆ**
ಉಳ್ಳಿಕಾಳು, ಹೆಸರುಕಾಳು, ಮಡಿಕೆಕಾಳು, ಬಟಾಣಿಕಾಳು, ಕಡ್ಲೆಕಾಳು, ಕಾಬುಲ್ ಕಡ್ಲೆಕಾಳು, ಅಲಸಂದಿಕಾಳು, ಅವರೆಕಾಳು, ಪುರಿ ಪಾಕೆಟ್, ಪರೋಟ ಪಾಕೆಟ್, ಚಪಾತಿ, ರೊಟ್ಟಿ, ರಾಗಿ ಮುದ್ದೆ, ಉಪ್ಪಿನಕಾಯಿ, ಸಾಂಬಾರ್, ಪಲ್ಯಗಳು ದೊರೆಯುತ್ತವೆ. ಮೀನಾಕ್ಷಿ ಭವನ : ಸಿದ್ದವೀರಪ್ಪ ಬಡಾವಣೆ, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ. ದೋಸೆ ಮಾಡುವ ಇಟ್ಟು, ಇಡ್ಲಿ ಮಾಡುವ ಇಟ್ಟು,ಪಡ್ಡು ಮಾಡುವ ಇಟ್ಟು ದೊರೆಯುತ್ತದೆ. ಸಿದ್ದವೀರಪ್ಪ ಬಡಾವಣೆ, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ.
90601 72745

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 East, 20x48 West, 20x30 South, 20x30 North, 20x30 East, ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ತಕ್ಷಣ ಬೇಕಾಗಿದ್ದಾರೆ**
ಟ್ಯಾಲಿ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಮತ್ತು ಕ್ಲರ್ಕ್ ಕಂ ಕ್ಯಾಷಿಯರ್ ಹುದ್ದೆಗಳಿಗೆ ಬೇಕಾಗಿದ್ದಾರೆ.
ಮೊ : 73530 56715

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆ, ವಿಜಯವಾಣಿ ಆಫೀಸ್ ಎದುರು, 3ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ 2BHK ಮನೆ ಬಾಡಿಗೆಗೆ ಇದೆ.
96200 21699

**ತಕ್ಷಣ ಬೇಕಾಗಿದ್ದಾರೆ**
5th, 7th, 9th, 10th PUC, Degree, ITI, Diploma ಯುವಕ-ಯುತಿಯರು ಆಫೀಸ್‌ಗಳಿಗೆ, ಶೋ ರೂಂಗಳಿಗೆ, ಬಿಗ್ ಬಜಾರ್ ಕಂಪನಿಗಳಿಗೆ ನೇರ ನೇಮಕಾತಿ ಸಂಬಳ : 15,500/- to 40,000/-. ವಸತಿ, ಊಟವಿದೆ.
ಮೊ. 90361 25229

**ವಾಣಿಜ್ಯ ಸ್ಥಳ ಬಾಡಿಗೆಗೆ**
1ನೇ ಮಹಡಿ, 400 ಚ. ಅಡಿ, 2ನೇ ಮಹಡಿ, 1200 ಚ. ಅಡಿ, ಕೋರ್ಟ್ ಸರ್ಕಲ್ ಹತ್ತಿರ (ಪಿಬಿ ರಸ್ತೆ) ಕುಂದುವಾಡ ರಸ್ತೆ, ದಾವಣಗೆರೆ. ಮಧ್ಯವರ್ತಿಗಳಿಗೆ ಪ್ರವೇಶವಿದೆ / ನೇರವಾಗಿ ಸಂಪರ್ಕಿಸಿ :
87468 12999

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾ ನಗರದಲ್ಲಿ, ವಿನಾಯಕ ಬಡಾವಣೆಯಲ್ಲಿ 60x40 North, 45x48 South, 33x40 South, ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ತಕ್ಷಣ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ : **ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್** ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಸೈಟ್ ಮಾರಾಟಕ್ಕೆ**
ಕಿರಣ್ ಭೂಸನೂರ್ (ಏಜೆಂಟ್ )
97315 63409
ಜೆ. ಹೆಚ್. ಪಟೇಲ್ ಬಡಾವಣೆ 20X30 ಪೂರ್ವ 30x40 ಉತ್ತರ 30x50 ಪಶ್ಚಿಮ (60ಅಡಿ ರಸ್ತೆಗೆ ) 40x60 ಪೂರ್ವ 50x80 ದಕ್ಷಿಣ.

**ಸೈಟ್ ಮಾರಾಟಕ್ಕೆ (KHB) ಕರ್ನಾಟಕ ಗೃಹ ಮಂಡಳಿ**
ಕಿರಣ್ ಭೂಸನೂರ್(ಏಜೆಂಟ್ )
97315 63409
ಕರ್ನಾಟಕ ಗೃಹ ಮಂಡಳಿ 40X60 ದಕ್ಷಿಣ, 40X60 ಪಶ್ಚಿಮ, 50X80 ಉತ್ತರ, 50x80 ಪೂರ್ವ, 30X50 ಪಶ್ಚಿಮ, 40X60 ಪೂರ್ವ, 30X50 ಪೂರ್ವ, 30x40 ಉತ್ತರ, 30x40 ಪೂರ್ವ

**PART TIME JOB**
ನಿಮ್ಮ ಮನೆಯಿಮದಲೇ (work from home) ಕೆಲಸ ಮಾಡಿ 9000/- ದಿಂದ 15,000/- ಸಂಪಾದಿಸಿರಿ.
81055 03664, 89714 63581

**ಸೈಟ್ ಮಾರಾಟಕ್ಕಿದೆ**
ನಿಟುವಳ್ಳಿಯಿಂದ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ಹೋಗುವ 60 ಅಡಿ ಸಿಮೆಂಟ್ ರಸ್ತೆಯಲ್ಲಿ ಇರುವ ವಾಣಿಜ್ಯ ಉಪಯೋಗಕ್ಕೆ ಬರುವಂತಹ 38x89=3382 ಚ.ಅ. ಅಳತೆಯ ಸೈಟ್ ಮಾರಾಟಕ್ಕಿದೆ.
98453 82270

**2 BHK HOUSE FOR LEASE / RENT**
Near Podar International School in J.H. Patel Badavane, Davanagere.
95358 41058

**EC / ಇಸಿ, E-swathu, Khatha Change Building Licence & Other Property Documents**
96118-66449

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆಗಳು ಮಾರಾಟಕ್ಕಿವೆ**
ಶಕ್ತಿನಗರ ಪಶ್ಚಿಮ 30x40, ಬನಶಂಕರಿ ಬಡಾವಣೆ ಪೂರ್ವ 30x40 (3 floor) ವಿದ್ಯಾನಗರ ಪಶ್ಚಿಮ 30x60 (3 floor) ತರಳಬಾಳು ಬಡಾವಣೆ 30x60 (ಡುಪ್ಲೆಕ್ಸ್) ಐಗೂರು ವಿಜಯಕುಮಾರ
99457 02495

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**ಮನೆ ಬಾಡಿಗೆಗೆ ಇದೆ**
ಗ್ರೌಂಡ್ ಫ್ಲೋರ್ ಪೂರ್ವ ಬಾಗಿಲು ಎರಡು ಬೆಡ್ ರೂಂ ಇಂಟೀರಯರ್ಸ್ ಆಗಿರುವ ಮನೆ ಬಾಡಿಗೆಗೆ ಇದೆ. ಬಾಲಾಜಿ ಲೇಔಟ್ ಕುಂದುವಾಡ ಕೆರೆ ಹತ್ತಿರ.
99861 46807

**ಮನೆ ಬಾಡಿಗೆಗಿದೆ**
ಗಣೇಶ ಪೇಟೆ, 2ನೇ ಕ್ರಾಸ್, ಶಿವಾಜಿ ನಗರ, #791/1, 1ನೇ ಮಹಡಿಯಲ್ಲಿ 15x30 ಅಳತೆಯ ಬೋರ್ ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಪೂರ್ವ ದಿಕ್ಕಿನ ಮನೆ ಬಾಡಿಗೆಗೆ ಇದೆ.
98445 46463, 89707 03696

**ಬೇಕಾಗಿದ್ದಾರೆ PUC/Degree**
ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ : 6.30ರ ನಂತರ **ಶ್ರೀ ಗುರು ಎಂಟರ್ ಪ್ರೈಸಸ್** #579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು & ಮಹಿಳೆಯರು (Day & Night) ಕೆಲಸಕ್ಕೆ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ.
94807 77338, 94821 09492

**WANTED**
Mobile Shop work Experienced Sale Executive-1 Office Work-1
Bhosle Telecome
Opp. Old Bustand & Smart Bazaar
98868 08412

**ಬೇಕಾಗಿದ್ದಾರೆ**
LKG ಮತ್ತು ಒಂದನೇ ತರಗತಿಯ ಮಕ್ಕಳಿಗೆ ಮನೆಪಾಠ (ಟ್ಯೂಶನ್) ಹೇಳಿಕೊಡಲು ಸೂಕ್ತ ಅನುಭವವುಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ. ವಿಳಾಸ : ಕಾಳಿದಾಸ ವೃತ್ತ, ಜಯನಗರ, ದಾವಣಗೆರೆ. ಸಂಪರ್ಕಿಸಿ :
77954 66999

**ಮನೆ ಮಾರಾಟಕ್ಕಿದೆ**
ಗಣೇಶ ಪೇಟೆ, 2ನೇ ಕ್ರಾಸ್ ಶಿವಾಜಿನಗರ #791/2, ಗ್ರೌಂಡ್ ಫ್ಲೋರ್, ಮೊದಲನೇ ಮಹಡಿ ಇರುವ 15x30 ಅಳತೆಯ ಉತ್ತರ ದಿಕ್ಕಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
91415 23746, 80503 70046

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಉತ್ತರ 30x66 (40 ಅಡಿ ರಸ್ತೆ) ಪೂರ್ವ-ಉತ್ತರ ಕಾರ್ನರ್ 60x40, ದಕ್ಷಿಣ 40x60, ಡಾಲರ್ಸ್ ಕಾಲೋನಿ ದಕ್ಷಿಣ 30x35 (ಅಕ್ಕ-ಪಕ್ಕ) 30x70, 30x40, 40x40, 30x50. ಐಗೂರು ವಿಜಯಕುಮಾರ
99457 02495

**Room To-Let**
1 RK with Fully Furnished with Solar water SS Layout 'A' Block, 17th Cross, Davangere.
98453 52460
96069 18129

**WANTED**
Accountants - 2 post
6 to 8 years Experience in Tally
Shamanur Sugar Ltd.,
374, 4th main, P.J. extn, Davangere.
98441 20003

**ಸೈಟ್ ಮಾರಾಟಕ್ಕಿದೆ**
ವಿದ್ಯಾನಗರದ ಮೇನ್ ರೋಡ್‌ನಲ್ಲಿ ಇರುವ ಶಿವಪಾರ್ವತಿ ದೇವಸ್ಥಾನದ ಪಕ್ಕದಲ್ಲಿರುವ 40 ಅಡಿ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x66 ಅಳತೆಯ ಸೈಟ್ ಮಾರಾಟಕ್ಕಿದೆ.
98453 82270

**ತಕ್ಷಣ ಬೇಕಾಗಿದ್ದಾರೆ**
ಟ್ಯಾಲಿ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಮತ್ತು ಕ್ಲರ್ಕ್ ಕಂ ಕ್ಯಾಷಿಯರ್ ಹುದ್ದೆಗಳಿಗೆ ಬೇಕಾಗಿದ್ದಾರೆ. ಸಂಪರ್ಕಿಸಿ :
73530 56715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Name Clarification**
I Anusuyamma R w/o Parashuramappa Resident @ 11th cross, Taralabalu Badavane, Davangere. in my aadhar card as Anusuyamma w/o Parashuramappa, In My pan card as Anusuyamma R. D/o Rudrappa in Passport my name as Anusuyamma I write to state that above said all names an referenced to me only and to name eles. In future I will be using my name as Anusuyamma R. w/o Parashuramappa before Notary, Davangere. on 3.8.2023.
Sd/- Anusuyamma R.

**Name Clarification**
I Smt Vani Nagabhushana S.K. w/o Nagabhushana B.S. Resident @ 6th Cross, 3rd main, Vinayaka Badavane, Davangere. my name mentined in my election ID card and Kotak Mahindra Bank as S.K. Vani. In aadhar card my name as vani Nagabhushan S.K. above said thes names are me only none one else. In future I will be using my name Vani Nagabhushana S.K. befor Notary Davangere on 28.07.2023
Sd/- Vani Nagabhushana S.K.

**1 BHK ಮನೆ ಬಾಡಿಗೆಗಿದೆ**
3588/288/42 ವಿನಾಯಕ ಬಡಾವಣೆ, 3ನೇ ಮೇನ್, 2ನೇ ಕ್ರಾಸ್, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿಂಭಾಗ, (ಸಿಂಗಲ್ ಬೆಡ್ ರೂಂ) (ಸಸ್ಯಹಾರಿಗಳಿಗೆ ಮಾತ್ರ)
96200 93206

**ಮನೆ ಮಾರಾಟಕ್ಕಿದೆ**
ಬಾಲಾಜಿ ಲೈಔಟ್ ಕುಂದುವಾಡ ಕೆರೆಯ ರಿಂಗ್ ರೋಡ್ ಹತ್ತಿರ 27x50 ಸೈಟ್‌ನಲ್ಲಿ ಕಟ್ಟಿರುವ 3 ಅಂತಸ್ತಿನ ಮನೆ ಮಾರಾಟಕ್ಕಿದೆ.
70199 02022

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or any Degree. ವಿಳಾಸ : **ಕಾವೇರಿ ಮೆಡಿಹೌಸ್ ಪ್ರೈ.ಲಿ.,** ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಆಫರ್.. ಆಫರ್..ಆಫರ್..**
ನಮ್ಮಲ್ಲಿ ಎಲ್ಲಾ ತರಹದ ಸೋಫಾ ಕುಷನ್, ಫರ್ನಿಚರ್ ಮಾಡುತ್ತೇವೆ. ವುಡ್ ಪಾಲೀಷ್ ಮಾಡುತ್ತೇವೆ. 1 ಬೆಡ್ ತೆಗೆದುಕೊಂಡರೆ 1 ಪಿಲ್ಲೋ ಫ್ರೀ. ರಿಪೇರಿ ಸಹ ಮಾಡುತ್ತೇವೆ.
88614 38237

**ಗ್ಯಾಸ್ ಗೀಜರ್**
Fully Automatic 2990/- Rs.
R.O. +UV ವಾಟರ್ ಫಿಲ್ಟರ್, 5490/- ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ : **ಮರುತ್ ಎಂಟರ್ ಪ್ರೈಸಸ್** ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ವಂತ ಬೈಕ್ ಉಳ್ಳವರಾಗಿರಬೇಕು. ಕೂಡಲೇ ಸಂಪರ್ಕಿಸಿ : 91083 42597
98800 42597, 8971119130
ವಾಟ್ಸಾಪ್ ನಂಬರ್. 70199 83025

**ಮನೆ ಬಾಡಿಗೆ**
2BHK ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ. ಕಾಲೇಜು ರೋಡ್ ನಿಟ್ಟುವಳ್ಳಿ, ಶ್ರೀರಾಮ್ ಬಿಲ್ಡಿಂಗ್, ಶ್ರೀ ಸಾಯಿ ಗಾರ್ಮೆಂಟ್ಸ್ ಹತ್ತಿರ. ಸೈಟುಗಳು ಮಾರಾಟಕ್ಕಿವೆ ಸುಬ್ರಮಣ್ಯ ನಗರ, ಹೈಟೆಕ್ ಆಸ್ಪತ್ರೆ ಹತ್ತಿರ, ಪುನೀತ್ ಬಡಾವಣೆ ಪಶ್ಚಿಮ ಮುಖದ 30x50 ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ.
98443 04848

**ಮನೆ ಮಾರಾಟಕ್ಕಿದೆ**
20x20 ಅಳತೆಯು ಹೊಸ ಆರ್‌ಸಿಸಿ ಮನೆ ಎಲ್ಲಾ ಸೌಕರ್ಯವುಳ್ಳ ಮನೆ ಮಾರಾಟಕ್ಕಿದೆ. ಎಸ್.ಜೆ.ಎಂ. ನಗರ, ಹೊಸಕ್ಯಾಂಪ್, ಆರ್.ಟಿ.ಓ. ಆಫೀಸ್ ಹತ್ತಿರ, ದಾವಣಗೆರೆ.
97391 00673

**ಸಾಲ ಸೌಲಭ್ಯ**
✦ ಮನೆ ಕಟ್ಟಲು ✦ ಮನೆ ರಿಪೇರಿ ✦ ಸೈಟು ಖರೀದಿಸಲು ✦ ಬೇರೆ ಬ್ಯಾಂಕಿನ ಸಾಲ ತೀರಿಸಲು ✦ ಮನೆ ಮೇಲೆ ಸಾಲ ✦ ಸೈಟಿನ ಮೇಲೆ ಸಾಲ ✦ ಹಂಚಿನ ಮನೆಗೆ ✦ ಶೀಟಿನ ಮನೆಗೆ, ಡೋರ್ ನಂ. ಮತ್ತು ರೆವಿನ್ಯೂ ಪ್ರಾಪರ್ಟಿ ಮೇಲೆ ಸಾಲ.
63614 28175

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
87490 98879

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಹೊಸ ಜೀವನ**
ಲಿಂಗಾಯತ, ಜಂಗಮ, ಬ್ರಾಹ್ಮಣ, ಜೈನ್ ವಿಶ್ವಕರ್ಮ ಮರುಮದುವೆ ಬಯಸುವ ಡಾಕ್ಟರ್ಸ್, ಇಂಜಿನಿಯರ್ಸ್, ಸರ್ಕಾರಿ ನೌಕರಿಯಲ್ಲಿರುವ ನಿವೃತ್ತಿಯಾಗಿ ಪಿಂಚಣಿ ಪಡೆಯುತ್ತಿರುವ ಎಲ್ಲ ಬಗೆಯ ವಿಧವೆ, ವಿಧುರ, ವಿಚ್ಛೇದಿತರ ಹೊಸ ಜೀವನಕ್ಕಾಗಿ ಸಂಪರ್ಕಿಸಿರಿ.
98807 29108

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**PG-CET COACHING**
Start From : 07-08-2023
10:00 AM to 5:00PM
Classes By Experts
STUDY MATERIAL+ LAPTOP BAG
24X7 LIBRARY + WI-FI
MOCK-TEST + MENTORING
SAMRUDDHI COACHING ACADEMY DAVANAGERE
9620262361 / 8147262361

**ಸಿಂಚನ ಕೋಚಿಂಗ್ ಸೆಂಟರ್**
Failed Batches II PUC PCMB, COMMERCE, ARTS
100% ಫಲಿತಾಂಶ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
85532 78258
88614 45913

**URGENTLY WANTED**
Civil Engineers with 3-4 years Site Experience for a reputed firm
76768 45173

**ಅಡಿಕೆ ಸಸಿಗಳಿಗಾಗಿ**
ಸಂಪರ್ಕಿಸಿ : 11000 ಅಡಿಕೆ ಸಸಿಗಳು ದೊರೆಯುತ್ತವೆ. ಸಂಪರ್ಕಿಸಿ :
99866 17127

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ಕೋರಿಯರ್ ಡೆಲವರಿ ಬಾಯ್ಸ್ ದಾವಣಗೆರೆ ಶಾಖೆಗೆ (Flipkart/Amazon Dalivery) ತಿಂಗಳ ಗಳಿಕೆ-25,000
99800 79893

**ಲೋನ್ಸ್ LOAN**
ವೈಯಕ್ತಿಕ ಸಾಲ / Personal Loan, ವ್ಯವಹಾರ ಸಾಲ / Bussiness Loan, ಗೃಹ ಸಾಲ / Home Loan, ಅಡಮಾನ ಸಾಲ / Mortgage Loan.
76248 68848, 91085 94778

# ಗ್ಯಾರಂಟಿ ಯೋಜನೆಯಿಂದ ಬಿಜೆಪಿಯವರ ಬಾಯಿ ಮುಚ್ಚಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ದಾವಣಗೆರೆ, ಆ.3- ಕಳೆದ ವರ್ಷ ದಾವಣಗೆರೆಯಲ್ಲಿ ಸಿದ್ದರಾಮಯ್ಯ ಅವರ ಅಮೃತ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಣೆ ಮಾಡಿದ್ದೆವು, ಅಂದು ಸೇರಿದ್ದ ಜನ ಸಾಗರದ ಫಲವೇ ಇಂದು ಅವರು ರಾಜ್ಯದ ಚುಕ್ಕಾಣಿ ಹಿಡಿದಿರುವುದು ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಎಲ್‌ಬಿಕೆ ಟ್ರಸ್ಟ್ ವತಿಯಿಂದ ನಗರದ ವೀರ ಮದಕರಿ ನಾಯಕ ವೃತ್ತದಲ್ಲಿ ಇಂದು ಹಮ್ಮಿಕೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರ 76ನೇ ಜನ್ಮದಿನದ ಸಮಾರಂಭದಲ್ಲಿ ಕೇಕ್ ಕತ್ತರಿಸಿ ಅವರು ಮಾತನಾಡಿದರು.

ಬಿಜೆಪಿ ಅವಧಿಯಲ್ಲಿ ಜಿಲ್ಲೆಯಲ್ಲಿ ಹಗರಣಗಳೇ ನಡೆದಿವೆ. 2.5 ಕೋಟಿ ರೂ. ಗಳಲ್ಲಿ ಆಗಿದ್ದ ಕುಂದುವಾಡ ಕೆರೆ ಅಭಿವೃದ್ಧಿಗೆ 15 ಕೋಟಿ ರೂ. ವೆಚ್ಚ ಮಾಡುತ್ತಿದ್ದಾರೆ. ಹಿರೇಕೆರೂರು ಬಳಿ ಸಹಕಾರಿ ಸಕ್ಕರೆ ಕಂಪನಿ ಸ್ಥಾಪನೆಗೆ ವಶಪಡಿಸಿಕೊಂಡಿದ್ದ 200 ಎಕರೆಗೂ ಹೆಚ್ಚು ಭೂಮಿಯನ್ನು ಸಂಸದರು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಇನ್ನು ಭೀಮಸಮುದ್ರದ ಮೂಲಕ ಸಾಗುವ ಅದಿರು ಲಾರಿಗಳಿಂದ ಒಂದು ಲಾರಿಗೆ 250 ರೂ. ಕಮೀಷನ್ ಪಡೆದಿದ್ದಾರೆ. ಈ ಎಲ್ಲ ಹಗರಣಗಳನ್ನು ಕಾಂಗ್ರೆಸ್ ಬಯಲಿಗೆಳೆಯಲಿದೆ.

ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್‌ಚಂದ್ರ, ಎಲ್‌ಬಿಕೆ ಟ್ರಸ್ಟ್ ಗೌರವಾಧ್ಯಕ್ಷ ಬಿ. ವೀರಣ್ಣ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷೆ ಲಕ್ಷ್ಮಿದೇವಿ ಬಿ. ವೀರಣ್ಣ, ಮೇಯರ್ ವಿನಾಯಕ ಪೈಲ್ವಾನ್, ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಎನ್.ಎಂ. ಆಂಜನೇಯ ಇದ್ದರು.

# ಉದ್ಯಾನವನಗಳಿಗೆ ಮೀಸಲಿಟ್ಟ ಜಾಗ ಕಬಳಿಕೆ

## ಕಠಿಣ ಕ್ರಮಕ್ಕೆ ಕಾಂಗ್ರೆಸ್ ಒತ್ತಾಯ

ದಾವಣಗೆರೆ, ಆ. 3- ನಗರದ ಉದ್ಯಾನವನಗಳಿಗೆ ಮೀಸಲಿಟ್ಟ ಜಾಗ ಕಬಳಿಕೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆಯಲ್ಲಿ ಬಿಜೆಪಿ ಆಡಳಿತ ಅವಧಿಯಲ್ಲಿನ ಒಂದೊಂದೇ ಅಕ್ರಮಗಳು ಬಯಲಾಗುತ್ತಿದ್ದು, ಸಾವಿರಾರು ಕೋಟಿ ರೂ.ಮೌಲ್ಯದ ಪಾಲಿಕೆ ವ್ಯಾಪ್ತಿಯ ಜಾಗ, ರಾಜಕಾಲುವೆ, ಉದ್ಯಾನವನಗಳ ಜಾಗ ಕಬಳಿಸಲಾಗಿದೆ. ಅಧಿಕಾರಿಗಳನ್ನು ಬಳಸಿಕೊಂಡು ಈ ಹಗರಣಗಳನ್ನು ಮಾಡಲಾಗಿದೆ ಎಂದರು.

ಪಾಲಿಕೆ ವ್ಯಾಪ್ತಿಯ ಎಸ್.ಎಸ್. ಬಡಾವಣೆಯ 23 ನೇ ವಾರ್ಡ್ ಗೆ ಸೇರಿದ ಸಾರ್ವಜನಿಕ ಬಳಕೆಗೆ ಮೀಸಲಾಗಿದ್ದ ಸರ್ಕಾರಿ ಜಾಗವನ್ನು ಕಬಳಿಸಿದ್ದು, ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ಸೇರಿ ಮಾರಾಟ ಮಾಡಿರುವುದು ಗೊತ್ತಾಗಿದೆ ಎಂದು ಹೇಳಿದರು.

ಲಕ್ಷ್ಮೀಫ್ಲೋರ್‌ಮಿಲ್ ಬಳಿ ಇರುವ ಪಾಲಿಕೆಯ ವಲಯ-2 ಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಸರ್ವೆ ನಂ. 78/2 ಜಾಗಕ್ಕೆ ಡೋರ್ ನಂಬರ್ ನೀಡಿ 3937/11, 3937/12, 3937/13, 3937/14 ರಲ್ಲಿ ತಲಾ 30x40 ಅಳತೆಯ ಸೈಟ್‌ಗಳನ್ನಾಗಿ ವಿಂಗಡಿಸಿ ನಾಲ್ಕು ಜನರಿಗೆ ನೋಂದಣಿ ಮಾಡಿಕೊಳ್ಳಲು ಪಾಲಿಕೆಯಿಂದಲೇ ಖಾತೆ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಸರ್ಕಾರಿ ಖಾಲಿ ನಿವೇಶನ ಮೀಸಲಿಟ್ಟಿದ್ದು, ಸಾರ್ವಜನಿಕರ ಬಳಕೆಗಾಗಿ ಆಸ್ಪತ್ರೆ, ಪಾರ್ಕ್ ಮತ್ತು ಶಾಲೆ ಸೇರಿದಂತೆ ಜನರಿಗಾಗಿ ಎಸ್ ಎಸ್ ಬಡಾವಣೆಯ ಈ ಜಾಗವನ್ನು ಕಾಯ್ದಿರಿಸಲಾಗಿತ್ತು. ಮಧ್ಯವರ್ತಿಗಳು ಹಾಗೂ ಪಾಲಿಕೆ ಸಿಬ್ಬಂದಿ ಸೇರಿ ಆಸ್ತಿ ವಿವರದ ಎಂಎಆರ್-19 , ಕೆಎಂಎಫ್-24 ಆಸ್ತಿ ವಿವರದ ದಾಖಲೆ ಪುಸ್ತಕಗಳಲ್ಲಿ ತಿದ್ದುಪಡಿ ಮಾಡಿ ಕ್ರಯ ಮಾಡಲು ಹಾಗೂ ಮಾರಾಟ ಮಾಡಲು ಅನುಕೂಲ ಮಾಡಿಕೊಟ್ಟಿದ್ದು ಯಾಕೆ? ಈಗಾಗಲೇ ಈ ನಿವೇಶನಗಳಿಗೆ ಡೋರ್ ನಂಬರ್ ಕೊಟ್ಟು ಖಾತೆ ಮಾಡಲಾಗಿದೆ. ಉಪನೋಂದಣಿ ಕಚೇರಿಯಲ್ಲೂ ನೋಂದಣಿ ಆಗಿದೆ ಎಂದು ಮಾಹಿತಿ ನೀಡಿದರು.

ಆಸ್ತಿ ಕಬಳಿಕೆ ಆರೋಪದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಸರ್ಕಾರಿ ಜಾಗಗಳನ್ನು ಮರಳಿ ಪಡೆಯಬೇಕು. ಇನ್ನೂ ಕೆಲವು ಕಡೆಗಳಲ್ಲಿ ಈ ರೀತಿಯ ಅಕ್ರಮಗಳು ನಡೆದಿದ್ದು, ಮುಂದಿನ ದಿನಗಳಲ್ಲಿ ದಾಖಲೆ ಸಮೇತ ಬಹಿರಂಗ ಪಡಿಸಲಾಗುವುದು ಎಂದರು.

ಖಾಸಗಿ ಬಸ್ ನಿಲ್ದಾಣ, ಅಶೋಕ ರಸ್ತೆಯ ಅಂಡರ್ ಬ್ರಿಡ್ಜ್ ಅವೈಜ್ಞಾನಿಕವಾಗಿ ನಿರ್ಮಾಣವಾಗಿದ್ದು, ಈ ಬಗ್ಗೆ ತನಿಖೆ ನಡೆಸಿದರೆ ಅಕ್ರಮ ಹೊರಬೀಳುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ್ ಗಡಿಗುಡಾಳ್, ಕೆ. ಚಮನ್ ಸಾಬ್, ನಾಗರಾಜ್ ಪಾಮೇನಹಳ್ಳಿ, ಜಗದೀಶ್, ಉಮೇಶ್, ಉದಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ರೈತರು ಕಾಂಪೋಸ್ಟ್ ಗೊಬ್ಬರ ತಯಾರಿಕೆ ಒತ್ತು ನೀಡಬೇಕು



## ಕೊಕ್ಕನೂರು

ಮಲೇಬೆನ್ನೂರು, ಆ. 03 - ಕೊಕ್ಕನೂರು ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಿಕೆ ಬಗ್ಗೆ ರೈತರಿಗೆ ಮಾಹಿತಿ ನೀಡುವ ಸೃಜನ ಶೀಲ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ವಿ.ವಿಜಯಕುಮಾರ್ ನಾಗನಾಳ ಅವರು ಕಾರ್ಯಕ್ರಮವನ್ನು ದೀಪ ಬೆಳಗಿಸುವ ಉದ್ಘಾಟಿಸಿದರು. ರೈತರು ಹಣ ಕೊಟ್ಟು ರಸಗೊಬ್ಬರಗಳನ್ನು ಬಳಸುವ ಬದಲು ಜೀವಾಯುತ ಹಾಗೂ ತ್ಯಾಜ್ಯವಸ್ತುಗಳ ಬಳಸಿ ಎರೆಹುಳುಗಳ ಮೂಲಕ ಕಾಂಪೋಸ್ಟ್ ಗೊಬ್ಬರ ತಯಾರು ಮಾಡಿ ಬೆಳೆಗಳಿಗೆ ಬಳಕೆ ಮಾಡಿದರೆ ಉತ್ತಮ ಇಳುವರಿ ಬರುತ್ತದೆ ಎಂದು ವಿಜಯಕುಮಾರ್ ತಿಳಿಸಿದರು.

ಗ್ರಾಮದ ದಾಸರ ಸೋಮಶೇಖರ್ ಮಾತನಾಡಿದರು. ಸಾವಯವ ಕೃಷಿಕರಾದ ಶಾಂತರಾಜ್, ನಿರಂಜನ್ ಪಾಟೀಲ್ ಮಾತನಾಡಿ, ರೈತರು ಸಾವಯವ ಕೃಷಿಗೆ ಒತ್ತು ನೀಡಿದರೆ ಕಡಿಮೆ ಖರ್ಚಿನಲ್ಲಿ ಉತ್ತಮ ಇಳುವರಿ ಪಡೆಯ ಬಹುದೆಂದರು.

ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಜ್ಞಾನ ವಿಕಾಸ ಸಮಾನ್ವಯಧಿಕಾರಿ ಸವಿತಾ, ಕೃಷಿ ಮೇಲ್ವಿಕಾಚಾರಕ ಗಂಗಾಧರ್, ವಲಯ ಮೇಲ್ವಿಚಾರಕಿ ಶಾರದ ಹಾಗು ಇತರರು ಭಾಗವಹಿಸಿದ್ದರು.

# ದೆಹಲಿ ವಲಯದ ಮಸೂದೆಗೆ ಲೋಕಸಭೆ ಒಪ್ಪಿಗೆ

ನವದೆಹಲಿ, ಆ. 3 - ದೆಹಲಿಯ ರಾಷ್ಟ್ರೀಯ ರಾಜಧಾನಿ ವಲಯ (ತಿದ್ದುಪಡಿ) ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ. ಪ್ರತಿಪಕ್ಷಗಳ ಸಭಾತ್ಯಾಗದ ನಡುವೆ ಮಸೂದೆಗೆ ಒಪ್ಪಿಗೆ ನೀಡಲಾಗಿದೆ.

ನಾಲ್ಕು ಗಂಟೆ ಕಾಲ ನಡೆದ ಚರ್ಚೆಯ ನಂತರ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಆಮ್ ಆದ್ಮಿ ಪಾರ್ಟಿ ನೇತೃತ್ವದ ದೆಹಲಿ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ಅದರ ಪರವಾಗಿ ಪ್ರತಿಪಕ್ಷಗಳು ಒಂದಾಗಿವೆ ಎಂದು ಆರೋಪಿಸಿದರು.

ಮಸೂದೆ ರಾಜ್ಯಸಭೆಯ ಒಪ್ಪಿಗೆ ಪಡೆಯಬೇಕಿದೆ. ರಾಜ್ಯಸಭೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಇಲ್ಲ. ಈ ಮಸೂದೆಗೆ ಅಂಗೀಕಾರ ಪಡೆಯಲು ಬಿಜೆಡಿ ಹಾಗೂ ವೈ.ಎಸ್.ಆರ್. ಕಾಂಗ್ರೆಸ್ ಪಕ್ಷಗಳ ಬೆಂಬಲಿಸುವುದು ನೆರವಾಗಲಿದೆ. ಲೋಕಸಭೆಯಲ್ಲಿ ಈ ಎರಡೂ ಪಕ್ಷಗಳು ಮಸೂದೆಯನ್ನು ಬೆಂಬಲಿಸಿವೆ.

ಪೊಲೀಸ್, ಸಾರ್ವಜನಿಕ ಸುವ್ಯವಸ್ಥೆ ಹಾಗೂ ಜಮೀನು ಹೊರತು ಪಡಿಸಿ ಉಳಿದ ಎಲ್ಲ ಸೇವೆಗಳ ನಿಯಂತ್ರಣವನ್ನು ದೆಹಲಿ ಸರ್ಕಾರಕ್ಕೆ ವಹಿಸಿ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಇದಾದ ನಂತರ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಆದೇಶವನ್ನು ತಡೆಯಲು ಸುಗ್ರೀವಾಜ್ಞೆ ಹೊರಡಿಸಿತ್ತು. ಈ ಸುಗ್ರೀವಾಜ್ಞೆಯ ಜಾಗದಲ್ಲಿ ಶಾಸನ ಜಾರಿಗೆ ತರಲಾಗುತ್ತಿದೆ.

# ಆಲೂರು ರಾಜಶೇಖರ್ ರಾಜೀನಾಮೆ

ದಾವಣಗೆರೆ,ಆ.3- ಶ್ರೀರಾಮ ಸೇನೆ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಆಲೂರು ರಾಜಶೇಖರ್ ತಿಳಿಸಿದ್ದಾರೆ.

# ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪಿಸಲು ಸರ್ಕಾರಕ್ಕೆ ಮನವಿ



ದಾವಣಗೆರೆ, ಆ.3- ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪಿಸುವಂತೆ ಸಮಾಜದ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಂದು ಮನವಿ ಸಲ್ಲಿಸಲಾಯಿತು.

ಸೋಮವಂಶ ಶ್ರೀಸಹಸ್ರಾರ್ಜುನ ಕ್ಷತ್ರಿಯ ವಂಶದವರು (ಸರ್ಕಾರಿ ಗೆಜೆಟ್‌ನಲ್ಲಿ ಪಟೆಗಾ ಎಂದಿದೆ) ಕರ್ನಾಟಕದಲ್ಲಿ ಅಂದಾಜು 16 ಲಕ್ಷ ಜನರಿದ್ದಾರೆ. ಈ ಸಮಾಜದಲ್ಲಿ ಶೇ.85ರಷ್ಟು ಜನರು ಕಡುಬಡವರಾಗಿದ್ದಾರೆ.

ಸೋಡಾ, ಕೂಲ್‌ಡ್ರಿಂಕ್ಸ್, ಸಾವಜಿ ಹೋಟೆಲ್, ವಾಚ್ ರಿಪೇರಿ, ಅಟೋ, ಗ್ಯಾರೆಜ್, ಟೇಲರ್, ಬೀದಿಬದಿ ವ್ಯಾಪಾರ, ಮೊಬೈಲ್ ರಿಪೇರಿ, ಕಿರಾಣಿ ಸೇರಿದಂತೆ ಚಿಕ್ಕ-ಪುಟ್ಟ ಕಸುಬು, ದಿನಗೂಲಿ ಮಾಡುವ ಜನರೇ ಹೆಚ್ಚಾಗಿದ್ದು, ಬೆರಳೆಣಿಕೆಯಷ್ಟು ಮಾತ್ರ ಶ್ರೀಮಂತರಿದ್ದಾರೆ.

ಸಮಾಜವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಹಾಗೂ ರಾಜಕೀಯ ರಂಗಲ್ಲಿಯೂ ಹಿಂದುಳಿದಿದ್ದು, ಸಮಾಜಕ್ಕೆ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪಿಸಿ ಆ ಮಂಡಳಿಯಿಂದ ನಮ್ಮ ಮುಂದಿನ ಪೀಳಿಗೆಗೆ ಆಸರೆಯಾಗಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಸಮುದಾಯ ಹೆಚ್ಚಿರುವ ಊರಿನಲ್ಲಿ ಒಂದು ರಸ್ತೆಗೆ ಶ್ರೀಸಹಸ್ರಾರ್ಜುನರ ವೃತ್ತ ಎಂದು ನಾಮಕರಣ ಮಾಡುವಂತೆಯೂ, ಹಾಗೂ ಕುಲಪುರುಷ ಶ್ರೀಸಹಸ್ರಾರ್ಜುನ ಮಹಾರಾಜರ ಜಯಂತಿಯನ್ನು ಸರ್ಕಾರದಿಂದ ಆಚರಿಸುವಂತೆಯೂ ಮನವಿ ಮಾಡಲಾಯಿತು.

ಸಮಾಜದ ಕಾರ್ಯದರ್ಶಿ ಮಹೇಶ್ ಕೆ. ಸೋಳಂಕಿ, ಮೇಘರಾಸಾ ಕಬಾಡಿ, ರಾಜು ಎಲ್. ಬದ್ದಿ, ಗಿರಿಧರ ಮೆಹರ್ವಾಡೆ, ಮಂಜುನಾಥ ಸಾಹಬೀಬ, ಅಮೃತರಾಜ್ ಬದ್ದಿ, ಓಂ ಪ್ರಕಾಶ್ ಮೆಹರ್ವಾಡೆ, ಗಜಾನನ ಸಾಭೂತೆ, ಅಶೋಕ್ ರಾಯಭಾಗಿ, ಪ್ರವೀಣ್ ಕಾಟೆ, ರಾಧಾ ಬಾಯಿ ಮೆಹರ್ವಾಡೆ, ಶುಭಾಂಜಲಿ ಕಠಾರೆ, ಗಾಯತ್ರಿ ಎಂ.ಹಬೀಬ, ಸೋನಾ ಬಾಯಿ, ಜ್ಯೋತಿ ಜಿ. ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಿಚ್ಚವ್ವನಹಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ಆನಂದ್



## ಉಪಾಧ್ಯಕ್ಷರಾಗಿ ಗಂಗೀಬಾಯಿ

ಹರಪನಹಳ್ಳಿ, ಆ.3- ನಿಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿಗೆ ಎರಡನೇ ಅವಧಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆ.ಆನಂದ್, ಉಪಾಧ್ಯಕ್ಷರಾಗಿ ಗಂಗೀಬಾಯಿ ಆಯ್ಕೆಯಾದರು.

ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಆನಂದ್ ಹಾಗೂ ಮಂಜುನಾಥ್, ಉಪಾಧ್ಯಕ್ಷ ಸ್ಥಾನಕ್ಕೆ ಗಂಗೀಬಾಯಿ ಹಾಗೂ ಶಾರದ ಅವರು ನಾಮಪತ್ರ ಸಲ್ಲಿಸಿದ್ದರು.

ಗ್ರಾಮ ಪಂಚಾಯ್ತಿಯ ಒಟ್ಟು 14 ಸದಸ್ಯರಲ್ಲಿ ಆನಂದ್ 8 ಮತಗಳನ್ನು ಪಡೆಯುವ ಮೂಲಕ ಜಯಶೀಲರಾದರೆ, ಕೆ.ಮಂಜುನಾಥ್ 6 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಗಂಗೀಬಾಯಿ 8 ಮತಗಳನ್ನು ಪಡೆದು ಆಯ್ಕೆಯಾದರೆ, ಶಾರದ ಅವರು 6 ಮತಗಳನ್ನು ಪಡೆದು ಪರಾಭವಗೊಂಡರು ಎಂದು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ರೇಣುಕಾದೇವಿ ತಿಳಿಸಿದರು.

ಈ ಸಂದರ್ಭದಲ್ಲಿ ನಿಚ್ಚವ್ವನಹಳ್ಳಿ ಕೆ. ಪರುಶುರಾಮಪ್ಪ, ಟಿ.ಶೇಖರಪ್ಪ, ಕೃಷ್ಣಪ್ಪ, ಸುರೇಶ್, ಶಾಂತಕುಮಾರ್, ಮಲ್ಲೇಶ್ ನಾಯ್ಕ್, ಲಿಂಗಣ್ಣ, ರಾಜು, ಹನುಮಂತಪ್ಪ, ಕೆಂಚಪ್ಪ, ಪಿ.ಪರಶುರಾಮ, ಪಿಡಿಓ ಮುಕ್ತಾರಲಿ ಸಿಬ್ಬಂದಿ ಹಾಜರಿದ್ದರು.

# ನಗರದಲ್ಲಿ ಇಂದು ಮಕ್ಕಳ ಹಕ್ಕುಗಳ ಕಾರ್ಯಾಗಾರ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಅಸ್ಪೈರ್ ಇಂಟರ್ ನ್ಯಾಷನಲ್ ಶಾಲೆಯ ಸಹಯೋಗದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಅಸ್ಪೈರ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಪೋಕ್ಸೋ ಕಾನೂನಿನ ಅರಿವು ಹಾಗೂ ಮಕ್ಕಳ ಹಕ್ಕುಗಳ ಕಾರ್ಯಾಗಾರ ನಡೆಯಲಿದೆ. ಜಿಲ್ಲಾ ನ್ಯಾಯಾಧೀಶರಾದ ಶ್ರೀಪಾದ ಅವರು ಕಾರ್ಯಕ್ರಮ ಉದ್ಘಾಟಿಸುವರು. ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ ಕರೆಣ್ಣವರ ಅಧ್ಯಕ್ಷತೆ ವಹಿಸುವರು.

# 'ಶ್ರಾವಣ ಸಂಭ್ರಮ-2023' ನಾಡಿದ್ದು ಬಿಎಸ್‌ಸಿಯಲ್ಲಿ ಡಬಲ್ ಡಿಸ್ಕೌಂಟ್

ದಾವಣಗೆರೆ, ಆ. 3- 'ಶ್ರಾವಣ ಸಂಭ್ರಮ -2023' ದ ಅಂಗವಾಗಿ ಆ. 6 ರಿಂದ 31 ರವರೆಗೆ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಅಂಗಡಿಯಲ್ಲಿ ಡಬಲ್ ಡಿಸ್ಕೌಂಟ್ ನೀಡಲಾಗುವುದು (ಶೇ. 10 + 10 ರಿಯಾಯತಿ) ಎಂದು ಮಾಲೀಕರಾದ ಬಿ.ಸಿ. ಚಂದ್ರಶೇಖರ್ ಹಾಗೂ ಬಿ.ಸಿ. ಶಿವ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಯನ ಮನೋಹರವಾದ ಸೀರೆಗಳು, ಲೇಡೀಸ್ ವೇರ್, ಮೆನ್ಸ್‌ವೇರ್, ಮಕ್ಕಳ ರೆಡಿಮೇಡ್ ಹಾಗೂ ಇತರೆ ನವನವೀನ ಬಟ್ಟೆಗಳ ಮೇಲೆ ರಿಯಾಯತಿ ಜೊತೆಗೆ ವಿಶೇಷ ರಿಯಾಯತಿ ನೀಡುವುದಾಗಿ ಹೇಳಿದರು.

ವರ್ಷಕ್ಕೊಮ್ಮೆ ಮಾತ್ರ ಈ ರೀತಿ ಡಬಲ್ ಡಿಸ್ಕೌಂಟ್ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್‌ನ ಎಲ್ಲಾ ಅಂಗಡಿಗಳಲ್ಲಿ ನೀಡಲಾಗು ವುದು. ನಮ್ಮ ಪ್ರತಿ ಅಂಗಡಿಯಲ್ಲೂ ಹಬ್ಬದ ವಾತಾವರಣವನ್ನು ನಿರ್ಮಾಣ ಮಾಡಿ, ಯೋಗ್ಯ ಬೆಲೆಗೆ ಗುಣಮಟ್ಟದ ಬಟ್ಟೆಗಳನ್ನು ಗ್ರಾಹಕರಿಗೆ ನೀಡಲಾಗುತ್ತದೆ. ಭಾರತದಲ್ಲಿ ಸಿಗುವ ಎಲ್ಲಾ ರೀತಿಯ ಡಿಸೈನ್ ಸೀರೆಗಳು, ಇನ್ನಿತರೆ ವಸ್ತ್ರಗಳನ್ನು ಸಹ ನಮ್ಮ ಅಂಗಡಿಯಲ್ಲಿ ಮಾರಾಟ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

# ವಿಕಲಚೇತನ ಅಭ್ಯರ್ಥಿಗಳಿಂದ ವಿವಿಧ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಜಿ

ದಾವಣಗೆರೆ, ಆ.3- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಫಲಾನುಭವಿ ಆಧಾರಿತವಾದ ವಿವಿಧ ಯೋಜನೆಗಳಿಗೆ ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಧಾರ್ ಯೋಜನೆ, ಮೆರಿಟ್ ವಿದ್ಯಾರ್ಥಿವೇತನ, ಅಂಧ ಮಹಿಳೆಗೆ ಜನಿಸುವ ಮಗುವಿನ ಆರೈಕೆಗೆ ಶಿಶುಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭೆ ಯೋಜನೆ, ವೈದ್ಯಕೀಯ ಪರಿಹಾರ ನಿಧಿ 8 ಯೋಜನೆಗಳನ್ನು ಡಿ.ಬಿ.ಟಿ.ಗೆ ಒಳಪಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದು, https://sevasindhu.karnataka.gov.in ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಮತ್ತು ಗ್ರಾಮೀಣ ಭಾಗದಲ್ಲಿ ಗ್ರಾಮ ಒನ್ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬಹುದು.

2022-23ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವವರು ಅರ್ಜಿ ಸಲ್ಲಿಸಲು ಅವಕಾಶವಿದ್ದು, ಅರ್ಹ ವಿಕಲಚೇತನರು ಅರ್ಜಿ ಸಲ್ಲಿಸಿ ಭೌತಿಕ ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಆಗಸ್ಟ್ 31 ರೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂ. ಸಂ. 08192-263936 ವಿಕಲಚೇತನರ ಸಹಾಯವಾಣಿ 08192-263939 ಹಾಗೂ ತಾಲ್ಲೂಕು ಪಂಚಾಯಿತಿ ಎಂ.ಆರ್.ಡಬ್ಲ್ಯೂಗಳಾದ ಶೈಲಜಾ ಕೆ.ಎಂ. (ಹೊನ್ನಾಳಿ)-9886366809, ಕೆ ಸುಬ್ರಮಣ್ಯಂ (ಚನ್ನಗಿರಿ)-9945738141, ಶಶಿಕಲಾ ಟಿ. (ಹರಿಹರ)-9945458058, ಎಂ.ಕೆ. ಶಿವನಗೌಡ (ಜಗಳೂರು)-9902105734, ಬಿ. ಚನ್ನಪ್ಪ (ದಾವಣಗೆರೆ)-9590829024 ಇವರನ್ನು ಸಂಪರ್ಕಿಸಲು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ ತಿಳಿಸಿದ್ದಾರೆ.

# ಜೈನ್ ಪಬ್ಲಿಕ್ ಶಾಲೆಯಲ್ಲಿ ಕಾರ್ಗಿಲ್ ವಿಜಯ ದಿವಸ್



ದಾವಣಗೆರೆ, ಆ.3- ಶ್ರೀ ಸುಪಾರ್ಶ್ವನಾಥ ವಿದ್ಯಾಸಂಸ್ಥೆ, ಜೈನ್ ಪಬ್ಲಿಕ್ ಶಾಲೆಯಲ್ಲಿ ಕಾರ್ಗಿಲ್ ವಿಜಯ ದಿವಸ್ ಹಾಗೂ ವಿದ್ಯಾರ್ಥಿ ಪದಾಧಿಕಾರಿ ಸಂಘಟನೆ ಮತ್ತು ಹೂಡಿಕೆ ಸಮಾರಂಭವನ್ನು ಕಳೆದ ವಾರ ನಡೆಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಉಪ ಪೊಲೀಸ್ ವರಿಷ್ಠಾಧಿಕಾರಿ ಪಿ.ಬಿ. ಪ್ರಕಾಶ್ ಅವರು, ಮಕ್ಕಳಿಗೆ ಸ್ಫೂರ್ತಿದಾಯಕ ವಿಷಯವನ್ನು ಹಾಗೂ ಸೃಷ್ಟಿಯಿಂದ ಸ್ಫೂರ್ತಿ ಪಡೆದು ಜ್ಞಾನಸಿದ್ಧಿ ಹೊಂದಿ ದೇಶಕ್ಕೆ ಶಕ್ತಿಯಾಗೋಣ ಎಂದು ತಿಳಿಸಿದರು.

ಮತ್ತೋರ್ವ ಅತಿಥಿಯಾದ ಎಂ.ಎಂ. ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಎಚ್.ವಿ. ವಾಮದೇವಪ್ಪ ಅವರು, ಪ್ರತಿಯೊಬ್ಬರಲ್ಲೂ ನಾಯಕತ್ವದ ಗುಣ ಇರುತ್ತದೆ. ಅದನ್ನು ಅಭಿವ್ಯಕ್ತಗೂಳಿಸುವ ಕಾರ್ಯದಲ್ಲಿ ಲೀನರಾಗಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಜೈನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಅಚಲ್ ಚಂದ್ ಜೈನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜೈನ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಎಸ್. ನಟರಾಜ್, ಕು. ಯಶೋಧರ ಮತ್ತಿತರರು ಉಪಸ್ಥಿತರಿದ್ದರು.

ಶ್ರೀಮತಿ ಹಮೀದ್‌ಖಾನ್ ಸಹ ಶಿಕ್ಷಕಿ ನಿರೂಪಿಸಿದರು. ಶ್ರೀಮತಿ ಕೆ. ಸುಜಾತ ಸ್ವಾಗತಿಸಿದರು. ಸಹ ಶಿಕ್ಷಕಿ ಶ್ರೀಮತಿ ರೋಜಾ ವಂದಿಸಿದರು.

# ನಶಿಸಿ ಹೋಗುತ್ತಿರುವ ನಾಟಕ ಕಲೆ: ಬಸವರಾಜ ಐರಣಿ ವಿಷಾದ



ದಾವಣಗೆರೆ, ಆ. 3- ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಕಲೆ ನಶಿಸಿ ಹೋಗುತ್ತಿದ್ದು, ರಾಜ್ಯದಲ್ಲಿ ನೂರಿಪ್ಪತ್ತಕ್ಕೂ ಹೆಚ್ಚು ನಾಟಕ ಕಂಪನಿಗಳು ಚಾಲ್ತಿಯಲ್ಲಿ ಇದ್ದವು. ಆದರೀಗ ಕೇವಲ 15-16 ಕಂಪನಿಗಳು ಮಾತ್ರ ಚಟುವಟಿಕೆಯಿಂದ ಇವೆ. ನಶಿಸಿ ಹೋಗುತ್ತಿರುವ ರಂಗಭೂಮಿಯನ್ನು ಉಳಿಸಿ, ಬೆಳೆಸುವ ಹೊಣೆ ಎಲ್ಲರ ಮೇಲಿದೆ ಎಂದು ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಬಸವರಾಜ ಐರಣಿ ಹೇಳಿದರು.

ನಗರದ ಪಿ.ಬಿ. ರಸ್ತೆಯಲ್ಲಿನ ಟಿಎಂ ವಿನಾಯಕ ಪಿಎಂಪಿಎಸ್ ಕಾಂಪೌಂಡಿನಲ್ಲಿ ಶ್ರೀ ಸಂತ ಶರೀಫ ಶಿವಯೋಗಿ ನಾಟ್ಯ ಸಂಘ ತೆಗ್ಗಿಹಳ್ಳಿ ಇವರ ವತಿಯಿಂದ, ಮಂಜುನಾಥ್ ಕುಂದೂರು ರಚಿಸಿ, ನಿರ್ದೇಶಿಸಿರುವ 'ಬಳೆಗಾರ ಹನುಮವ್ವ' ನಾಟಕದ 101 ನೇ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಸಿನಿಮಾ, ಧಾರವಾಹಿ, ಸಾಮಾಜಿಕ ಜಾಲತಾಣಗಳಿಂದಾಗಿ ರಂಗಭೂಮಿ ಕಲೆ ಕ್ಷೀಣಿಸುತ್ತಿದೆ. ಆದರೆ ದಾವಣಗೆರೆ ಜನತೆ ಯಾವತ್ತೂ ಸಹ ರಂಗಕಲೆ ಮತ್ತು ಕಲಾವಿದರನ್ನು ತಿರಸ್ಕರಿಸಿಲ್ಲ. ಬದಲಾಗಿ ಅವರನ್ನು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ ಎಂದರು.

ನಾಟಕ ಕೇವಲ ಮನರಂಜನೆಗೋಸ್ಕರ ಅಲ್ಲ. ವ್ಯಕ್ತಿಯ ಮಾನಸಿಕ ಸದೃಢತೆಯನ್ನು ಹೆಚ್ಚಿಸಿ, ಮನಕ್ಕೆ ಮುದ ನೀಡುವ ಕಲೆಯಾಗಿದೆ. ಮಾನವನ ಬದುಕನ್ನು ಸಹ ಸದೃಢಗೊಳಿಸುವ ಶಕ್ತಿ ನಾಟಕ ಕಲೆಗೆ ಇದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದ 'ಮಹಲಿಂಗ ರಂಗ' ಪ್ರಶಸ್ತಿ ಪುರಸ್ಕೃತರೂ, ಹಿರಿಯ ಪತ್ರಕರ್ತರೂ ಆದ ಬಾಮ ಬಸವರಾಜಯ್ಯ ಅವರು, ನಾಟಕ ಕಂಪನಿಗಳಿಗೆ ಆಶ್ರಯ ನೀಡಿದ ದಾವಣಗೆರೆ ಆರ್ಥಿಕ ಮುಗ್ಗಟ್ಟು ಹೋಗಲಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಚಿಂದೋಡಿ ವೀರಪ್ಪ, ಚಿಂದೋಡಿ ಲೀಲಾ, ಕಂಚಿಕೇರಿ ಶಿವಣ್ಣ ಮುಂತಾದ ರಂಗ ಕಲಾವಿದರ ಕೊಡುಗೆ ಅಪಾರವಾದುದು ಎಂದರು.

ಓಬಳೇಶ್, ಬನಹಟ್ಟಿ ವಾಸಣ್ಣನಂತಹ ಅನೇಕ ಕಲಾ ದಿಗ್ಗಜರು ರಂಗಭೂಮಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ. ನೇಪಥ್ಯಕ್ಕೆ ಸರಿಯುತ್ತಿರುವ ರಂಗಭೂಮಿ ಮುಂದೊಂದು ದಿನ ಮತ್ತೆ ರಂಗಭೂಮಿ ತನ್ನ ಪಾರುಪತ್ಯವನ್ನು ಮೆರೆಯಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಮಾತನಾಡಿ, ರಂಗ ಕಲಾವಿದರ ಬದುಕು ಶೋಚನೀಯ ಸ್ಥಿತಿ ತಲುಪಿರುವುದು ವಿಷಾದ ಸಂಗತಿಯಾಗಿದೆ. ಕಲಾವಿದರು ಬಡವರಾಗಿದ್ದರೂ ಅವರಲ್ಲಿರುವ ಹೃದಯ ಶ್ರೀಮಂತಿಕೆಯಿಂದ ಜನರ ಮನಸ್ಸನ್ನು ಅರಳಿಸುವ, ನೋವನ್ನು ಮರೆಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಎಂದರು.

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ, ತಾ.ಪಂ. ಮಾಜಿ ಸದಸ್ಯ ಆಲೂರು ನಿಂಗರಾಜ್ ಅವರು, ನಾಟಕಗಳನ್ನು ನೋಡುವ ಮೂಲಕ ರಂಗ ಕಲೆಯನ್ನು ಉಳಿಸಿ, ಬೆಳೆಸುವ ಕೆಲಸವನ್ನು ಸಹೃದಯರು ಮಾಡಬೇಕಾಗಿದೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ್, ಕೆ.ಬಿ.ಆರ್. ಡ್ರಾಮಾ ಕಂಪನಿ ಮಾಲೀಕ ಚಿಂದೋಡಿ ಚಂದ್ರಧರ, ಪತ್ರಕರ್ತ ಸುರೇಶ್ ಕುಣಿಬೆಳಕೆರೆ, ನಾಟಕ ರಚನೆಕಾರ ಕುಂದೂರು ಮಂಜಣ್ಣ, ನಾಟಕ ಕಂಪನಿ ಮಾಲೀಕ ಖಿತಾಲಸಾಬ್ ಆರ್. ಬಣಗಾರ, ಸಂಚಾಲಕಿ ಆಶಾರಾಣಿ ಬಿಜಾಪುರ, ಮ್ಯಾನೇಜರ್ ಮಹಾಂತೇಶ್ ಬಿ. ಬಿರಾದಾರ್, ಇಪ್ಟಾ ಜಿಲ್ಲಾಧ್ಯಕ್ಷ ಐರಣಿ ಚಂದ್ರು ಮತ್ತಿತರರು ಉಪಸ್ಥಿತರಿದ್ದರು.



## ಸಂಚಾರಿ ದಂಡದಲ್ಲಿ ರಿಯಾಯಿತಿ

ದಾವಣಗೆರೆ, ಆ.3- ಸರ್ಕಾರದ ಆದೇಶದನ್ವಯ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ಶೇಕಡ 50 ರಷ್ಟು ರಿಯಾಯಿತಿ ನೀಡಲಾಗುತ್ತದೆ. ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ 2023 ರ ಫೆಬ್ರವರಿ 11 ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ರಿಯಾಯಿತಿ ನೀಡಲಾಗುತ್ತಿದ್ದು, ಸೆಪ್ಟೆಂಬರ್ 9 ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಇದು ಅನ್ವಯಿಸುತ್ತದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿ ಮಹಾವೀರ ಎಂ. ಕರೆಣ್ಣವರ ತಿಳಿಸಿದ್ದಾರೆ.

## ಪಡಿತರ ಚೀಟಿ : ದಾಖಲೆ ಹಾಜರುಪಡಿಸಿ

ದಾವಣಗೆರೆ, ಆ.3- ಜಿಲ್ಲೆಯ ಎಲ್ಲಾ ನ್ಯಾಯಬೆಲೆ ಅಂಗಡಿ ಮಾಲೀಕರು ಎಸ್.ಸಿ, ಎಸ್.ಟಿ ಪಡಿತರ ಚೀಟಿದಾರರ ಕುಟುಂಬದ ಮಾಹಿತಿಯನ್ನು ಆಗಸ್ಟ್ ತಿಂಗಳ ಪಡಿತರ ವಿತರಿಸುವ ಸಂದರ್ಭದಲ್ಲಿ ಪಡಿತರ ಚೀಟಿಯ ಜೆರಾಕ್ಸ್ ಹಾಗೂ ಎಜೆಎಸ್‌ಕೆ ವತಿಯಿಂದ ನೀಡಿರುವ ಜಾತಿ ಪ್ರಮಾಣದ ಜೆರಾಕ್ಸ್ ಪ್ರತಿಯನ್ನು ನೀಡಬೇಕು ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಹರಿಹರದ ಶಿಕ್ಷಣಾಧಿಕಾರಿಯಾಗಿ ನಿಂಗಪ್ಪ

ಹರಿಹರ, ಆ. 3 - ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಕೆ.ಟಿ. ನಿಂಗಪ್ಪ ಅಧಿಕಾರ ವಹಿಸಿಕೊಂಡರು. ಪ್ರಾ.ಶಾ.ಶಿ ಸಂಘದ ಪ್ರಧಾನ ಕಾರ್ಯದರ್ಶಿ ಶರಣಕುಮಾರ ಹೆಗಡೆ, ಜಿಲ್ಲಾ ಸಂಘದ ಉಪಾಧ್ಯಕ್ಷ ಚನ್ನಬಸಪ್ಪ, ಉಪಾಧ್ಯಕ್ಷರಾದ ಹೆಚ್.ಜ್ಯೋತಿ, ಕರಿಬಸಪ್ಪ ಕುಪ್ಪೇಲೂರು, ಖಜಾಂಚಿ ವಿನೋದ, ಸಂಘಟನಾ ಕಾರ್ಯದರ್ಶಿ ರುದ್ರಣ್ಣ, ಮಾಜಿ ಕಾರ್ಯದರ್ಶಿ ಮಂಜಣ್ಣ ಬಿದಿರಿ, ಸದಸ್ಯ ನಾಗರಾಜ್, ಗೌರವಾಧ್ಯಕ್ಷ ಗದಿಗೆಪ್ಪ ಹಳೇಮನೆ ಮತ್ತಿತರರು ಹಾಜರಿದ್ದರು.

## ಸಾರ್ವಜನಿಕ ಪ್ರಕಟಣೆ

ವಿಜಯಲಕ್ಷ್ಮೀ ಗೋಳಪ್ಪನವರ್ ಬಿನ್ ಸಿದ್ದರಾಮಪ್ಪ ಯಲಿ, ವಾಸ : ಮನೆ ನಂ. 12, ಪೋಕ್ರಾನ್ ರೋಡ್ ನಂ. 1., ರನ್‌ವಾಲ್ ಪ್ಲಾಜಾ, ವರ್ತಕ ನಗರ, ಥಾಣೆ, ಜೆ.ಕೆ. ಗ್ರಾಮ, ಮಹಾರಾಷ್ಟ್ರ ರಾಜ್ಯ ಮೊ. ನಂ. 97694 27627, 99726 11022 ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :-

ಮೇಲ್ಕಂಡ ನನ್ನ ಕಕ್ಷಿದಾರರು ದಾವಣಗೆರೆ ಸಿಟಿ, ಎಸ್.ಎಸ್. ಬಡಾವಣೆ ಬಿ ಬ್ಲಾಕ್‌ನಲ್ಲಿ ಬರುವ ಸೈಟ್ ನಂ. 12, ಡೋರ್ ನಂ. 4846/12, ವಿಸ್ತೀರ್ಣ 30x42 ಖಾಲಿ ನಿವೇಶನವನ್ನು ದಿನಾಂಕ 07.03.2019 ರಂದು ಎಸ್.ಆರ್. ನಂ. 12485/2018-19 ರಂತೆ ನೋಂದಣಿಯಾಗಿರುವ ಕ್ರಯಪತ್ರದ ಮೂಲಕ ಶ್ರೀ ಎಂ. ನಂದೀಶ್ ಬಿನ್ ಲೇಟ್ ಎಂ. ಶಿವಮೂರ್ತಪ್ಪ ಇವರಿಂದ ಖರೀದಿ ಮಾಡಿರುತ್ತೇನೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಅಸಲು ಕ್ರಯಪತ್ರಗಳಾದ ದಿನಾಂಕ : 03.02.1997ರ ಎಸ್.ಆರ್.ನಂ. 7307/1996-97 ಮತ್ತು ದಿನಾಂಕ : 13.04.2016ರ ಎಸ್.ಆರ್.ನಂ. 643/2016-17 ಮತ್ತು ದಿನಾಂಕ : 07.03.2019ರ ಎಸ್.ಆರ್. ನಂ. 21485/2018-19 ಅಸಲು ಕ್ರಯಪತ್ರಗಳು ದಿನಾಂಕ : 21.07.2023 ರಂದು ವಿದ್ಯಾನಗರದಲ್ಲಿ ಜೆರಾಕ್ಸ್ ಮಾಡಿಸಲು ತೆಗೆದುಕೊಂಡು ಹೋದಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತವೆ. ನನ್ನ ಕಕ್ಷಿದಾರರು ಎಷ್ಟು ಹುಡುಕಿದರೂ ಸಹ ಸದರಿ ಅಸಲು ದಾಖಲೆಗಳು ಸಿಕ್ಕಿರುವುದಿಲ್ಲ. ಆ ಬಗ್ಗೆ ನಮ್ಮ ಕಕ್ಷಿದಾರರು ದಿನಾಂಕ : 28.07.2023ರಂದು ಪೋಲಿಸ್ ಕಂಪ್ಲೇಂಟ್ ನಂ. 0662239/2023ರಂತೆ ದೂರು ದಾಖಲಿಸಿರುತ್ತಾರೆ. ಆ ಕಾರಣ ಸದರಿ ಮೇಲ್ಕಂಡ ಅಸಲು ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲಿ ಅಥವಾ ಈ ಕೆಳಕಂಡ ವಿಳಾಸದಲ್ಲಿ ಕಾಣಿಸಿರುವ ವಕೀಲರನ್ನಾಗಲಿ ಸಂಪರ್ಕಿಸಿ ಸದರಿ ದಾಖಲೆಗಳನ್ನು ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

ಶ್ರೀ ಆರ್.ಟಿ. ವಿನಯ ಕುಮಾರ
ವಕೀಲರು, #82/18, 1ನೇ ಫ್ಲೋರ್,
ಅರುಣ ಟಾಕೀಸ್ ಹತ್ತಿರ,
ಪಿ.ಬಿ. ರೋಡ್, ದಾವಣಗೆರೆ.

ಸಹಿ/- ಆರ್.ಟಿ. ವಿನಯ ಕುಮಾರ, ವಕೀಲರು
#1862/19, 4ನೇ ಮೇನ್, ಹೆಚ್.ಆರ್.ಬಿ. ನಗರ,
ಸೇಂಟ್ಸ್ ಜಾನ್ಸ್ ಹೈ ಸ್ಕೂಲ್ ಹತ್ತಿರ, ಶಿವಕುಮಾರಸ್ವಾಮಿ
ಬಡಾವಣೆ, 1ನೇ ಹಂತ, ದಾವಣಗೆರೆ. 9844597838

## ಅಭಿನಂದನೆಗಳು



### ಶ್ರೀಮತಿ ಕವಿತಾ ಜೋಶಿ

ದಿ|| ಜನಾರ್ದನ್ ಕೆ. ಮತ್ತು ಶ್ರೀಮತಿ ರಾಜಲಕ್ಷ್ಮಿ
ಕೆ.ಜೆ. ಕೃಷ್ಣ ಬೇಕರಿ ಮಾಲೀಕರು, ದಾವಣಗೆರೆ. ಇವರ ಪುತ್ರಿ
ಶ್ರೀ ವಿರೂಪಾಕ್ಷ ಜೋಶಿ ಇವರ ಪತ್ನಿ

ಬೆಂಗಳೂರಿನ RVCE ಕಾಲೇಜಿನಲ್ಲಿ, ಡಾ. ರಾಜಲಕ್ಷ್ಮಿ ಎಂ. ಇವರ ಮಾರ್ಗದರ್ಶನದಲ್ಲಿ "Nanocomposite Mixed Matrix Membranes for Desalination" ಎನ್ನುವ ವಿಷಯದ ಬಗ್ಗೆ ಸಂಶೋಧನೆ ನಡೆಸಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ತಮ್ಮ ಮಹಾಪ್ರಬಂಧವನ್ನು ಮಂಡಿಸಿ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ Phd ಪದವಿ ಪಡೆದಿದ್ದಾರೆ. ಆಗಸ್ಟ್ 1ರಂದು, ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ 23ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಯಿತು. ಇವರು ತಮ್ಮ ಕುಟುಂಬ ವರ್ಗಕ್ಕೆ ಹಾಗೂ ತಾವು ಇಂಜಿನಿಯರಿಂಗ್ ಓದಿದ ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ.

ಇವರಿಗೆ ಶುಭಕೋರುವವರು :

ಮಾ|| ಶೀಲಾವತಿ ಡಿ. ಜೋಶಿ, ಮಾ|| ರಾಜಲಕ್ಷ್ಮಿ
ಮತ್ತು ಕುಟುಂಬ ವರ್ಗದವರು

## ಶ್ರೀ ಸೋಹನ್ ರಾಜ್ (ಸನ್ನಿ) ನಿಧನ



ದಿ|| ಆರ್.ಕೆ. ನಾಯ್ಕ ಮತ್ತು ಶ್ರೀಮತಿ ಶಕುಂತಲ ನಾಯ್ಕ
ಇವರ ದ್ವಿತೀಯ ಪುತ್ರ

### ಶ್ರೀ ಸೋಹನ್ ರಾಜ್ (ಸನ್ನಿ)

ದಾವಣಗೆರೆ.

ಇವರು ದಿನಾಂಕ : 02.08.2023 ಬುಧವಾರ ಬೆಳಿಗ್ಗೆ 7.30ಕ್ಕೆ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ತಾಯಿ, ಅಣ್ಣ, ಅತ್ತಿಗೆ, ಅಕ್ಕ-ಭಾವ, ಪುಟಾಣಿಗಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಪಾರ್ಥಿವ ಶರೀರವನ್ನು ದಿನಾಂಕ : 04.08.2023ರ ಶುಕ್ರವಾರದಂದು #1917/57, 4ನೇ ಮುಖ್ಯರಸ್ತೆ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆಯ ಶ್ರೀಯುತರ ನಿವಾಸದಲ್ಲಿ ಬೆಳಿಗ್ಗೆ 11.00 ಯಿಂದ ಸಾರ್ವಜನಿಕ ದರ್ಶನಕ್ಕೆ ಇರಿಸಲಾಗುವುದು.
ಅಂತ್ಯಕ್ರಿಯೆಯನ್ನು ಅಂದೇ ಮಧ್ಯಾಹ್ನ 3.00 ಗಂಟೆಗೆ ದಾವಣಗೆರೆ ತೋಳಹುಣಸೆಯಲ್ಲಿರುವ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖ ತಪ್ತ ಕುಟುಂಬ ವರ್ಗ
ಫೋನ್ : 7795840401, 99804 21482


Reg.No.: DR:DVG:RSR/25770/2000-01 EST : 04.08.2000

## ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ



ಜೆ. ಚೆಲುವಪ್ಪ
ಅಧ್ಯಕ್ಷರು

"ಶಿವಗೌರಿ", ಮೊದಲನೇ ಮಹಡಿ,
ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಪಕ್ಕ,
ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-6.
ಫೋ : 08192-796875, ಮೊ : 9844833876

### 24ನೇ ವರ್ಷಕ್ಕೆ ಪಾದಾರ್ಪಣೆ



ಎನ್.ಜಿ. ಮೋಹನ್
ಉಪಾಧ್ಯಕ್ಷರು

ನಮ್ಮ ಸೊಸೈಟಿಯು ನಿಮ್ಮೆಲ್ಲರ ಸಹಕಾರದಿಂದ ದಿನಾಂಕ : 04-08-2023ಕ್ಕೆ 23 ವರ್ಷಗಳನ್ನು ಪೂರೈಸಿ, 24ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಇದರ ಯಶಸ್ಸಿಗೆ ಕಾರಣಕರ್ತರಾದ ನಮ್ಮ ಸಂಘದ ಸರ್ವಸದಸ್ಯರಿಗೂ, ಸಂಘದ ಮೇಲೆ ವಿಶ್ವಾಸವಿಟ್ಟು ಠೇವಣಿ ಮಾಡಿದ ಠೇವಣಿದಾರರಿಗೆ, ಮಾರ್ಗದರ್ಶನ ನೀಡಿದ ಸಹಕಾರ ಸಂಘಗಳ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ, ಲೆಕ್ಕ ಪರಿಶೋಧಕರಿಗೂ, ತೆರಿಗೆ ಸಲಹೆಗಾರರಿಗೂ, ಸಂಘದ ವ್ಯವಹಾರ ಮಾಡಲು ಸಹಕರಿಸಿದ ವಿವಿಧ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೂ, ಸಂಘದ ಸಿಬ್ಬಂದಿ ವರ್ಗದವರಿಗೂ, ಸಂಘದ ಕಾನೂನು ಸಲಹೆಗಾರರಿಗೂ, ಸಂಘದ ಕಟ್ಟಡ ಮೌಲ್ಯ ಮಾಪಕರಿಗೂ, ಪಿಗ್ಮಿ ಸಂಗ್ರಹಕಾರರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಘದ ಅಭಿವೃದ್ಧಿಗೆ ಕಾರಣರಾದವರೆಲ್ಲರಿಗೂ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.

ಸಂಘದ ಕಛೇರಿಯಲ್ಲಿ ಬೆಳಿಗ್ಗೆ 10-00 ಕ್ಕೆ ಶ್ರೀ ಲಕ್ಷ್ಮಿ, ಸರಸ್ವತಿ ಮತ್ತು ವಿಘ್ನೇಶ್ವರ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರು ಆಗಮಿಸಬೇಕೆಂದು ವಿನಂತಿಸಲಾಗಿದೆ.

### ಸಂಘದ ಆರ್ಥಿಕ ಪ್ರಗತಿಯ ಪಕ್ಷಿನೋಟ

| ವಿವರಗಳು | 2019-2020 | 2020-2021 | 2021-2022 | 2022-2023 |
|---|---|---|---|---|
| ಸಂಘದ ಷೇರು ಬಂಡವಾಳ | 96,84,500-00 | 1,00,66,000-00 | 1,05,93,500-00 | 1,15,13,000-00 |
| ಸಂಘದ ಸದಸ್ಯರ ಸಂಖ್ಯೆ | 3106 | 3101 | 3293 | 3518 |
| ಠೇವಣಿಗಳು | 16,75,95,236-08 | 18,84,79,077-68 | 21,27,85,245-08 | 24,77,53,088-00 |
| ಸಾಲ ಮತ್ತು ಮುಂಗಡಗಳು | 15,55,80,428-00 | 16,39,73,788-00 | 17,44,15,205-00 | 19,10,05,088-00 |
| ಸಂಘದ ದುಡಿಯುವ ಬಂಡವಾಳ | 19,49,03,194-00 | 21,94,24,447-00 | 24,24,92,570-00 | 28,75,40,649-00 |
| ವಿನಿಯೋಗ (ಹೂಡಿಕೆಗಳು) | 3,19,32,036-00 | 4,98,85,549-00 | 6,20,78,104-00 | 7,37,07,517-00 |
| ಲಾಭ | 31,48,506-76 | 35,19,262-10 | 38,02,161-20 | 40,31,711-28 |
| ಲಾಭಾಂಶ | 12% | 12% | 14% | 14% ಉದ್ದೇಶಿತ |

### ಆಡಳಿತ ಮಂಡಳಿ ಸದಸ್ಯರು


ಜೆ.ಕೆ. ಶಿವಾನಂದ
ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು


ಹೆಚ್.ಬಿ. ಗೋಣಪ್ಪ
ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು


ಬಿ.ರಮೇಶ್(ಪಿ.ಜೆ)
ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು


ವಿ. ಮಂಜುನಾಥ
ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು


ರಮೇಶ್ ಬಿ.
ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು


ಎನ್. ನಿಂಗಪ್ಪ
ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು


ಹೆಚ್.ಸಿ. ವಾಣಿ
ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು


ಸುನಂದ ಮಂಜುನಾಥ
ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು


ಡಿ.ಬಿ. ಚಂದ್ರಪ್ಪ
ನಿರ್ದೇಶಕರು


ಎಸ್.ರವಿಸ್ವಾಮಿ
ವಿಶೇಷ ಆಹ್ವಾನಿತರು


ಶ್ರೀಮತಿ ವಂದನಾ ಹೆಚ್.ಎಂ.
ವಿಶೇಷ ಆಹ್ವಾನಿತರು


ದಯಾನಂದ ದೊಡ್ಡಮನಿ
ಕಾರ್ಯದರ್ಶಿ ಎಂ.ಎ.

### ಠೇವಣಿಗಳ ಮೇಲಿನ ಬಡ್ಡಿದರ

| | | | |
|---|---|---|---|
| 15 ದಿನದಿಂದ 45 ದಿನಗಳವರೆಗೆ | 5% | 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 8.5% |
| 46 ದಿನದಿಂದ 90 ದಿನಗಳವರೆಗೆ | 6% | 2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ | 9.5% |
| 91 ದಿನದಿಂದ 180 ದಿನಗಳವರೆಗೆ | 6.5% | 3 ವರ್ಷದ ಮೇಲ್ಪಟ್ಟು | 10.5% |
| 181 ದಿನದಿಂದ 1 ವರ್ಷದವರೆಗೆ | 7.5% | | |

ಹಿರಿಯ ನಾಗರೀಕರಿಗೆ ಹೆಚ್ಚುವರಿಯಾಗಿ 0.5% ಬಡ್ಡಿ ನೀಡಲಾಗುವುದು



BSC®
Since 1938

ಶ್ರಾವಣ ಸಂಭ್ರಮ-2023
ನಿಮ್ಮೆಲ್ಲರ ಬಹುದಿನಗಳ ನಿರೀಕ್ಷೆ

## ಡಬಲ್ ಡಿಸ್ಕೌಂಟ್

ದಿನಾಂಕ: 06-08-2023 ನೇ
ಭಾನುವಾರದಿಂದ ಪ್ರಾರಂಭ

ಎಲ್ಲವೂ ಹೊಸತು....

ವರ್ಷದಲ್ಲಿ ಕೇವಲ ಒಮ್ಮೆ ಮಾತ್ರ
ಈ ಡಬಲ್ ಡಿಸ್ಕೌಂಟ್....ಹೊಸ ಅನುಭವ
ಬನ್ನಿ-ನೋಡಿ ಆನಂದಿಸಿ....ನಂತರ ಕೊಳ್ಳಿರಿ

ರಿಯಾಯಿತಿ + ವಿಶೇಷ ರಿಯಾಯಿತಿ

ಬಿ.ಎಸ್.ಚನ್ನಬಸಪ್ಪ & ಸನ್ಸ್®
ಕಾಳಿಕಾದೇವಿ ರಸ್ತೆ | ಅಕ್ಕಮಹಾದೇವಿ ರಸ್ತೆ, | ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ.